ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

# ಶೋಧ

## ಶಾಲೆಯಿಂದ ಹೊರಗುಳಿದ ಹಾಗೂ ಶಾಲೆ ಬಿಟ್ಟ ಮಕ್ಕಳ ಶಿಕ್ಷಣಕ್ಕಾಗಿ ಹಾಜರಾತಿ ಪ್ರಾಧಿಕಾರಗಳಿಗೆ ಒಂದು ದಿನದ ಕಾರ್ಯಾಗಾರ



ತರಬೇತಿ ಸಂಪನ್ಮೂಲ ಸಾಹಿತ್ಯ

2019 - 20

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ

ನಂ. 4, 100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು – 85

ಕರ್ನಾಟಕ ಸರ್ಕಾರ
Government of karnataka

# ಶಾಲೆಯಿಂದ ಹೊರಗುಳಿದ ಹಾಗೂ ಶಾಲೆ ಬಿಟ್ಟ ಮಕ್ಕಳ ಶಿಕ್ಷಣಕ್ಕಾಗಿ ಹಾಜರಾತಿ ಅಧಿಕಾರಿಗಳ ಕಾರ್ಯಾಗಾರ

# 2019–20

–

**ತರಬೇತಿ ಸಂಪನ್ಮೂಲ ಸಾಹಿತ್ಯ**

**ಡಿ.ಎಸ್.ಇ.ಆರ್.ಟಿ, ನಂ–04, 100 ಅಡಿ ವರ್ತುಲ ರಸ್ತೆ,**

**ಬನಶಂಕರಿ 3ನೇ ಹಂತ , ಬೆಂಗಳೂರು–85**

**ಶಾಲೆಯಿಂದ ಹೊರಗುಳಿದ ಹಾಗೂ ಶಾಲೆ ಬಿಟ್ಟ ಮಕ್ಕಳ ಶಿಕ್ಷಣಕ್ಕಾಗಿ ಹಾಜರಾತಿ ಅಧಿಕಾರಿಗಳ ಕಾರ್ಯಾಗಾರ**

**2019–20ರ**

**ಸಂಪನ್ಮೂಲ ಸಾಹಿತ್ಯ**

**ಪರಿಕಲ್ಪನೆ ಮತ್ತು ಮಾರ್ಗದರ್ಶನ**

**ಎಸ್.ಆರ್ ಉಮಾಶಂಕರ್,** ಭಾ.ಆ.ಸೇ.

ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಬೆಂಗಳೂರು

**ಡಾ. ಎಂ ಟಿ ರೇಜು,** ಭಾ.ಆ.ಸೇ

**ರಾಜ್ಯ ಯೋಜನಾ ನಿರ್ದೇಶಕರು**

**ಸಮಗ್ರ ಶಿಕ್ಷಣ ಅಭಿಯಾನ, ಬೆಂಗಳೂರು**

**ಡಾ. ಕೆ.ಜಿ. ಜಗದೀಶ,** ಭಾ.ಆ.ಸೇ

**ಆಯುಕ್ತರು**

**ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು**

**–: ಬೆಂಬಲ ಮತ್ತು ಮಾರ್ಗದರ್ಶನ :–**

- **ಶ್ರೀ ಗೋಪಾಲಕೃಷ್ಣ ಹೆಚ್ ಎನ್,** ನಿರ್ದೇಶಕರು, ಡಿ ಎಸ್ ಇ ಆರ್ ಟಿ, ಬೆಂಗಳೂರು.
- **ಶ್ರೀಮತಿ ಗಾಯತ್ರಿದೇವಿ ಟಿ ಎನ್,** ಸಹ ನಿರ್ದೇಶಕರು, ಡಿ ಎಸ್ ಇ ಆರ್ ಟಿ, ಬೆಂಗಳೂರು
- **ಶ್ರೀ ಕೆಂಚೇಗೌಡ ಎನ್,** ಉಪನಿರ್ದೇಶಕರು, ಡಿ ಎಸ್ ಇ ಆರ್ ಟಿ, ಬೆಂಗಳೂರು

**–: ಸಾಹಿತ್ಯ ರಚನಾ ತಂಡ ;–**

- **ಡಾ. ಜಿ.ವಿ ಹರಿಪ್ರಸಾದ್,** ಹಿರಿಯ ಉಪನ್ಯಾಸಕರು, ಡಯಟ್ ಶಿವಮೊಗ್ಗ.
- **ಶ್ರೀ ಟಿ.ಕೆ ರಾಘವೇಂದ್ರ,** ಹಿರಿಯ ಉಪನ್ಯಾಸಕರು, ಡಯಟ್ ಕೋಲಾರ.
- **ಶ್ರೀ ಕೆ.ವಿ ವಿಶ್ವನಾಥ್,** ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಬೆಂಗಳೂರು.
- **ಶ್ರೀ ಸಿ. ವೇದಮೂರ್ತಿ,** ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಬೆಂಗಳೂರು.
- **ಶ್ರೀ ಚಕ್ರಧರ್,** ಎನ್.ಐ.ಎಸ್.ಜಿ, ಡಿ.ಎಸ್.ಇ.ಆರ್.ಟಿ ಬೆಂಗಳೂರು.
- **ಶ್ರೀ ಪ್ರಶಾಂತ್ ಜಿ,** ಸ.ಶಿ. ಸ.ಹಿ.ಪ್ರಾ.ಶಾಲೆ, ಬಿಡದಿ, ರಾಮನಗರ ಜಿಲ್ಲೆ.

## ಪರಿವಿಡಿ

ಎಲ್ಲಾ ಮಕ್ಕಳು ಶಿಕ್ಷಣ ಪಡೆಯುವ ಔಚಿತ್ಯ ....................1–2
1. ಶಾಲೆಯಿಂದ ಹೊರಗೆ ಉಳಿದ ಮಕ್ಕಳು ಮತ್ತು ಅವರ ಶಿಕ್ಷಣ....................3–4
2. ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣಕ್ಕಾಗಿ ಆಯೋಜಿಸಿರುವ ಕಾರ್ಯಕ್ರಮಗಳು....................5–8
3. ಮಗು ಮತ್ತು ಹಕ್ಕುಗಳು....................9
4. ಮಕ್ಕಳ ಶಿಕ್ಷಣ ಮತ್ತು ಸಮುದಾಯ....................10–12
5. ಹಾಜರಾತಿ ಅಧಿಕಾರಿಗಳ ಕರ್ತವ್ಯಗಳು....................13–14
6. ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಅಧಿನಿಯಮ, 2009....................15–20
7. ಅನುಬಂಧಗಳು....................21–67

**ಶಿಕ್ಷಣ ಸಂಯೋಜಕರಿಗೆ ಶಾಲೆ ಬಿಟ್ಟ ಮಕ್ಕಳನ್ನು ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಕರೆತರುವ ಬಗ್ಗೆ ಒಂದು ದಿನದ ಕಾರ್ಯಾಗಾರದ ಸಾಹಿತ್ಯ**

# ಪ್ರವೇಶಿಕೆ

## ಎಲ್ಲಾ ಮಕ್ಕಳು ಶಿಕ್ಷಣ ಪಡೆಯುವ ಔಚಿತ್ಯ

**'ವಿಶ್ವದ ಯಾವುದೇ ಮಗು ಶಿಕ್ಷಣದಿಂದ ವಂಚಿತವಾಗಬಾರದು. ಏಕೆಂದರೆ ಜಗತ್ತು ಮುನ್ನಡೆಯುವುದು ಮಕ್ಕಳ ಹೆಜ್ಜೆಗಳ ಮೇಲೆ. ಅವರಿಗೆ ಅಗತ್ಯವಾದ ಅಕ್ಕರೆ, ಅನ್ನ ಮತ್ತು ಅಕ್ಷರ ಈ ಮೂರನ್ನೂ ನೀಡುವುದು ಸಮಾಜದ ಜವಾಬ್ದಾರಿ'**

ದೇಶದ ಸುಸ್ಥಿರ ಅಭಿವೃದ್ಧಿ ಮಾನವರಿಂದ ಮಾತ್ರ ಸಾಧ್ಯ. ಯಾವುದೇ ಸಂಸ್ಥೆಗಳು ಮಾನವರಿಂದ ರಚಿತವಾಗಿ, ಮಾನವರ ಮೂಲಕವೇ ಕಾರ್ಯ ನಿರ್ವಹಿಸಲ್ಪಡುತ್ತವೆ. ಮಾನವರಿಲ್ಲದೆ ಯಾವ ಸಂಸ್ಥೆಯು ಅಸ್ತಿತ್ವಕ್ಕೆ ಬರಲಾರದು ಮತ್ತು ಅಸ್ತಿತ್ವದಲ್ಲಿ ಇರಲಾರದು. ಈ ಸಂಸ್ಥೆಗಳಲ್ಲಿ ಮಾನವ ಸಂಪನ್ಮೂಲದ ಗುಣಮಟ್ಟ ಆ ಸಂಸ್ಥೆಯ ಅಭಿವೃದ್ಧಿಯನ್ನು ನಿರ್ಧರಿಸಿರುತ್ತದೆ.

ಪ್ರತಿಯೊಂದು ಸಂಸ್ಥೆಗೂ ಉತ್ಪಾದನಾಂಗಗಳಿದ್ದು ಅವು ಭೌತಿಕ ಸಂಪನ್ಮೂಲಗಳು, ಬಂಡವಾಳ ಸಂಪನ್ಮೂಲಗಳು ಹಾಗೂ ಮಾನವ ಸಂಪನ್ಮೂಲಗಳಾಗಿರುತ್ತವೆ. ಈ ಎಲ್ಲಾ ಸಂಪನ್ಮೂಲಗಳಲ್ಲಿ ಮಾನವ ಸಂಪನ್ಮೂಲ ಮಾತ್ರ ಸಜೀವ, ಚೈತನ್ಯಮಯ ಹಾಗೂ ಕಾರ್ಯಶೀಲ ಉತ್ಪಾದನಾಂಗವಾಗಿದೆ. ಸಾಮಾನ್ಯ ಮಾನವ ಜೀವಿ ಮಾನವ ಸಂಪನ್ಮೂಲವೆನಿಸಿಕೊಳ್ಳಲು, ಕಾರ್ಯನಿರತರಾದ ಅವರಲ್ಲಿ ಕಂಡುಬರುವ ಜ್ಞಾನ, ನೈಪುಣ್ಯತೆ, ಕಾರ್ಯ ಸಾಮರ್ಥ್ಯ, ಮೇಧಾಶಕ್ತಿ ಮತ್ತು ಪ್ರವೃತ್ತಿಗಳ ಸಮೂಹವಾಗಿದೆ.

ಮಾನವ ಸಂಪನ್ಮೂಲ ಅಭಿವೃದ್ಧಿಯ ಅಂತಿಮ ಉದ್ದೇಶವು ವ್ಯಕ್ತಿಗಳ ಆತ್ಮಗೌರವ, ವೃತ್ತಿಪರ ಯೋಗಕ್ಷೇಮ, ಮಾಡುವ ಕಾರ್ಯದಲ್ಲಿ ತೃಪ್ತಿ, ಮತ್ತು ಪ್ರೇರಣೆಗಳಿಗೆ ನೆರವಾಗುವುದು ಹಾಗೂ ಅವುಗಳನ್ನು ಬಲಪಡಿಸುವುದೇ ಆಗಿದೆ.

**ಮಾನವ ಸಂಪನ್ಮೂಲಗಳ ಅಭಿವೃದ್ಧಿಯಿಂದ ದೇಶದ ಆಬಿವೃದ್ಧಿ.**

ಒಂದು ಸುಸಂಘಟಿತ ಮಾನವ ಸಂಪನ್ಮೂಲವು ಸಮಾಜದಲ್ಲಿ ವ್ಯಕ್ತಿಗಳ ಜ್ಞಾನ, ಕಾರ್ಯದಕ್ಷತೆ, ವೃತ್ತಿ ನೈಪುಣ್ಯ, ಸಾಮಾಜಿಕ ಹೊಂದಾಣಿಕೆ ಮುಂತಾದ ಸಕಾರಾತ್ಮಕ ಬಲವನ್ನು ಮೂಡಿಸುತ್ತದೆ. ಇದು ಕಂಪನಶೀಲ ಸಮಾಜದ ನಿರ್ಮಾಣದ ಮೂಲವೂ ಹೌದು (ವೈಬ್ರಂಟ್ ಸೊಸೈಟಿ). ಶಿಕ್ಷಣದಿಂದ ಮಾತ್ರ ಇಂತಹ ವ್ಯಕ್ತಿತ್ವ ಮತ್ತು ಸಮಾಜದ ನಿರ್ಮಾಣ ಸಾಧ್ಯ.ಆದ್ದರಿಂದ ಸ್ವಾತಂತ್ರ್ಯಾನಂತರದಲ್ಲಿ ಶಿಕ್ಷಣ ಹಾಗೂ ಆರೋಗ್ಯ ಈ ಎರಡು ಆಂಶಗಳ ಸಾಧನೆಗಾಗಿ ನಿರಂತರ ಹತ್ತು ಹಲವು ಪ್ರಯತ್ನಗಳು ಸಾಗುತ್ತಿವೆಯಾದರೂ ಪರಿಪೂರ್ಣ ಯಶಸ್ಸು ಸಾಧಿಸಲಾಗಿಲ್ಲ.

ಈ ಕಂಪನಶೀಲ ಸಮಾಜದ ನಿರ್ಮಾಣ ಮತ್ತು ರಾಷ್ಟ್ರದ ಅಭಿವೃದ್ಧಿಗಾಗಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಅಗತ್ಯ. ಶಿಕ್ಷಣ ಅಂತಹಾ ಕೌಶಲ ಮತ್ತು ಪಕ್ವತೆ ಒದಗಿಸಬಲ್ಲದು. ಆದ್ದರಿಂದ ಇಂದು ಮಕ್ಕಳ ಶಿಕ್ಷಣದ ಹಕ್ಕು ಮೂಲಭೂತ ಹಕ್ಕಾಗಿದೆ. **ಅದಕ್ಕೂ ಮುಖ್ಯವಾಗಿ ಅದು 21 (ಎ) ಅಡಿ ಜೀವಿಸುವ ಹಕ್ಕಿನ ಭಾಗವಾಗಿದೆ. ಅಲ್ಲಿಗೆ ಪ್ರತಿ ವ್ಯಕ್ತಿಯ ಜೀವದೊಂದಿಗೆ ಶಿಕ್ಷಣವು ಅಂಟಿಕೊಂಡಿರುತ್ತದೆ.**

ಈ ದೇಶದ ಪ್ರತಿಯೊಬ್ಬ ನಾಗರೀಕನಿಗೂ ಜೀವಿಸುವ ಮೂಲಭೂತ ಹಕ್ಕಿದೆ. ಹಾಗೆ ಜೀವಿಸಿದ್ದಾರೆಂದರೆ ಅವರಿಗೆ ಶಿಕ್ಷಣವನ್ನು ಒದಗಿಸಲೇ ಬೇಕಾದ ಜವಾಬ್ದಾರಿ ಸಮಾಜದ, ಕಾರ್ಯಾಂಗದ ಮೇಲಿದೆ. ಆದ್ದರಿಂದಲೇ ಶಿಕ್ಷಣ ಜೀವಿಸುವ ಹಕ್ಕಿನ ಅವಿಭಾಜ್ಯ ಅಂಗವಾಗಿದೆ. ಜೀವಿಸುವ ಹಕ್ಕು ಮೂಲಭೂತ ಹಕ್ಕಾದರೆ ಶಿಕ್ಷಣ ಪಡೆಯುವ ಹಕ್ಕು ಕೂಡ ಪ್ರತಿ ನಾಗರೀಕರ ಮೂಲಭೂತ ಹಕ್ಕು.

1950 ರಲ್ಲಿ ಅಳವಡಿಸಿಕೊಳ್ಳಲಾದ ಭಾರತದ ಸಂವಿಧಾನದಲ್ಲಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವು ರಾಜ್ಯ ನಿರ್ದೇಶಕ ತತ್ವದ ಭಾಗವಾಗಿತ್ತು. ಸಂವಿಧಾನದ 45ನೇ ವಿಧಿಯ ಪ್ರಕಾರ ದೇಶದ ಸಂವಿಧಾನ ಜಾರಿಯಾದ 10 ವರ್ಷದ ಅವಧಿಯಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು 14 ವರ್ಷದ ವಯೋಮಾನದವರೆಗಿನ ಎಲ್ಲ ಮಕ್ಕಳಿಗೂ ನೀಡಬೇಕೆಂಬ ಆಶಯವನ್ನು ಹೊಂದಲಾಗಿತ್ತಾದರೂ ಈ ಪ್ರಯತ್ನದಲ್ಲಿ ಇದುವರೆಗೂ ಪರಿಪೂರ್ಣವಾದ ಯಶಸ್ಸು ಸಾಧ್ಯವಾಗಿರಲಿಲ್ಲ. ಸಂವಿಧಾನದ 4ನೇ ಭಾಗದಲ್ಲಿ ಅನುಚ್ಛೇದ 45ನ್ನು ರಾಜ್ಯ ನಿರ್ದೇಶಕ ತತ್ವಗಳನ್ನಾಗಿ ಪರಿಗಣಿಸಿರುವುದರಿಂದ ಇವುಗಳಿಗೆ ಕಾನೂನಿನ ಮನ್ನಣೆ ನೀಡಲು ಸಂವಿಧಾನಾತ್ಮಕವಾಗಿ ಅವಕಾಶವಿರಲಿಲ್ಲ.

ವಿಶ್ವಸಂಸ್ಥೆಯ ಅಂಗವಾದ ಯುನೆಸ್ಕೋ ತನ್ನ ಸದಸ್ಯ ರಾಷ್ಟ್ರಗಳಲ್ಲಿ ಶಿಕ್ಷಣದ ಹಕ್ಕಿಗಾಗಿ ಕೆಲವು ನಿಯಮಗಳನ್ನು ಹಾಕಿದೆ. ಇದರಲ್ಲಿ ಪರಿಚ್ಛೇದ 4ರ ಪ್ರಕಾರ ಪ್ರಾಥಮಿಕ ಶಿಕ್ಷಣವು ಉಚಿತ ಹಾಗು ಕಡ್ಡಾಯವಾಗಿರಬೇಕೆಂದು ಒತ್ತಿ ಹೇಳಿದೆ. ಅದೇ ರೀತಿ ಪರಿಚ್ಛೇದ 13 ಮತ್ತು 28 ಕೂಡ ಪ್ರಾಥಮಿಕ ಶಿಕ್ಷಣವು ಒಂದು ಮೂಲಭೂತ ಹಕ್ಕು ಎಂದು ಪ್ರತಿಪಾದಿಸಿವೆ.

ಈ ಮಕ್ಕಳ ಹಕ್ಕುಗಳಲ್ಲಿ ಪ್ರಮುಖವಾದವುಗಳನ್ನು ಇಲ್ಲಿ ನೀಡಲಾಗಿದ್ದು ಅವುಗಳನ್ನು ಓದಿ ಅರ್ಥೈಸಿಕೊಳ್ಳುವುದು ಮುಖ್ಯ

**ಶಿಕ್ಷಣ ಹಾಗೂ ಸಾಂಸ್ಕೃತಿಕ ಹಕ್ಕುಗಳು**

★ ಉಚಿತ ಪ್ರಾಥಮಿಕ ಶಿಕ್ಷಣ ಪಡೆಯಲು

★ ಪ್ರೌಢಶಿಕ್ಷಣ ಹಾಗೂ ವೃತ್ತಿಶಿಕ್ಷಣ ಪಡೆಯಲು ಅವಕಾಶ.

- ★ ಮಗುವಿನ ವ್ಯಕ್ತಿತ್ವ, ಪ್ರತಿಭೆ, ಮಾನಸಿಕ ಹಾಗೂ ಭೌತಿಕ ಸಾಮರ್ಥ್ಯಗಳನ್ನು ಪೂರ್ಣವಾಗಿ ಬೆಳೆಸುವಂತಹ ಶಿಕ್ಷಣ ಪಡೆಯುವ ಹಕ್ಕು
- ★ ಮಗು ಪರಿಪೂರ್ಣವಾದ ವಯಸ್ಕ ಜೀವನವನ್ನು ಮುಕ್ತ ಸಮಾಜದಲ್ಲಿ ನಿರ್ವಹಿಸುವಂತೆ ಸಾಮರ್ಥ್ಯವನ್ನು ಕೊಡುವ ಶಿಕ್ಷಣ
- ★ ಮಗು ಕುಟುಂಬದ ಬಗ್ಗೆ ಗೌರವವನ್ನು, ಸಂಸ್ಕೃತಿಯನ್ನು ಗುರುತಿಸಬಲ್ಲ ಭಾಷೆಯನ್ನು ಕಲಿಸುವ ಮತ್ತು ಪರಿಸರವನ್ನು ಸಂರಕ್ಷಿಸಲು ಬೇಕಾದಂಥ ಗುಣಗಳನ್ನು ಅಭಿವೃದ್ಧಿಗೊಳಿಸುವ ಶಿಕ್ಷಣ ಪಡೆಯುವ ಹಕ್ಕು.
- ★ ಪರಸ್ಪರ ಹೊಂದಾಣಿಕೆ, ಶಾಂತಿ, ಸಹಿಷ್ಣುತೆ ಹಾಗೂ ಸಮಾನತೆಯ ಭಾವನೆಯನ್ನು ಬೆಳೆಸುವ ಶಿಕ್ಷಣ ಪಡೆಯುವ ಹಕ್ಕು.
- ★ ಸಾಂಸ್ಕೃತಿಕ, ಕಲಾತ್ಮಕ, ಕ್ರೀಡೆ ಹಾಗೂ ತನ್ನ ವಿರಾಮವನ್ನು ಫಲಪ್ರದವಾಗಿ ಕಳೆಯುವ ಹಕ್ಕು.
- ★ ತನ್ನ ಸಾಂಸ್ಕೃತಿಕ, ಧಾರ್ಮಿಕ ಕ್ರಿಯೆಗಳಲ್ಲಿ ಭಾಗವಹಿಸುವ ಹಾಗೂ ತನ್ನ ಭಾಷೆಯನ್ನು ಬಳಸುವ ಹಕ್ಕು ಇದೆ.

**ಪೋಷಕರ ಜವಾಬ್ದಾರಿ**

- ★ ತಮ್ಮ ಮಕ್ಕಳನ್ನು ಸಾಕಿ ಸಲಹುವುದು, ಬೆಳೆಸುವುದು ತಂದೆ ತಾಯಿಗಳ ಜವಾಬ್ದಾರಿ. ಇದು ಕಾನೂನು ಬದ್ಧವಾಗಿ ಪೋಷಕರಿಗೂ ಅನ್ವಯಿಸುತ್ತದೆ.
- ★ ಒಡಂಬಡಿಕೆಯಲ್ಲಿ ಹೇಳಿರುವ ಎಲ್ಲಾ ಹಕ್ಕುಗಳು ಮಕ್ಕಳಿಗೆ ದೊರಕಬೇಕೆಂದಿದ್ದಲ್ಲಿ ಅಗತ್ಯವಾದೆಡೆ ಪೋಷಕರಿಗೆ, ತಂದೆತಾಯಿಯರಿಗೆ ಕೆಲವು ಸವಲತ್ತುಗಳನ್ನು ಸರ್ಕಾರ ತನ್ನ ವ್ಯವಸ್ಥೆ ಅಥವಾ ಸೇವಾ ಸಂಸ್ಥೆಗಳ ಮೂಲಕ ಒದಗಿಸಬೇಕು
- ★ ದುಡಿಯುವ ಪೋಷಕರಿಗೆ ಅವರ ಮಕ್ಕಳ ಪಾಲನೆಗಾಗಿ ವ್ಯವಸ್ಥೆ ಮಾಡಿಕೊಳ್ಳುವ ಹಕ್ಕಿದೆ. ಇದಕ್ಕಾಗಿ ಎಲ್ಲೆಲ್ಲಿ ದುಡಿಯುವ ಪೋಷಕರಿದ್ದಾರೋ ಅಲ್ಲೆಲ್ಲಾ ಶಿಶುಪಾಲನಾ ಕೇಂದ್ರಗಳನ್ನು ಮತ್ತು ಆ ರೀತಿಯ ಸೇವಾ ಸೌಲಭ್ಯಗಳನ್ನು ಸರ್ಕಾರ ವ್ಯವಸ್ಥೆ ಮಾಡಬೇಕು.

**ವಿಶೇಷ ಸಂರಕ್ಷಣೆಯ ಹಕ್ಕು**

- ★ ಮಗುವು ತನ್ನ ಸಾಮರ್ಥ್ಯಕ್ಕೆ ಮೀರಿದ ಕೆಲಸ ಕಾರ್ಯಗಳಲ್ಲಿ ತೊಡಗಿದಾಗ, ಮಾದಕ ವಸ್ತುಗಳ ಚಟಕ್ಕೆ ಒಳಪಟ್ಟಾಗ, ಲೈಂಗಿಕ ಶೋಷಣೆ ಅಥವಾ ಲೈಂಗಿಕ ದುರುಪಯೋಗವಾದಾಗ, ಅಪಹರಣ ಮುಂತಾದ ಶೋಷಣೆಗಳಿಗೆ ಒಳಪಟ್ಟಾಗ ಸಂರಕ್ಷಣೆ ಹೊಂದುವ ಹಕ್ಕು.
- ★ ಯಾವುದೇರೀತಿಯ ಪಕ್ಷಪಾತಕ್ಕೆ ಒಳಪಟ್ಟಾಗ ಸಂರಕ್ಷಣೆ ಹೊಂದುವ ಹಕ್ಕು.

ಯಾವುದೇ ಮಗು ಶಾಲೆ ದೂರ ಅಥವಾ ತನ್ನ ವಾಸಸ್ಥಳದ ನೆರೆಹೊರೆಯಲ್ಲಿ ಶಾಲೆ ಲಭ್ಯವಿಲ್ಲವೆಂಬ ಕಾರಣಕ್ಕೆ ಪ್ರಾಥಮಿಕ ಶಿಕ್ಷಣದಿಂದ ವಂಚಿತವಾಗದಂತೆ ಮಾಡುವುದು ಆಯಾ ಸರ್ಕಾರಗಳ ಆದ್ಯ ಕರ್ತವ್ಯವೆಂದು ಯುನೆಸ್ಕೋ ಹೇಳಿದೆ. ವರ್ಣ, ಜಾತಿ, ಧರ್ಮ, ಲಿಂಗ, ಭಾಷೆ, ರಾಜಕೀಯ ಅಥವಾ ಬೇರೆ ಯಾವುದೇ ತಾರತಮ್ಯವಿಲ್ಲದಂತೆ ಮಗುವಿಗೆ ವಿದ್ಯಾಭ್ಯಾಸವನ್ನು ಒದಗಿಸಬೇಕೆಂದು ಯುನೆಸ್ಕೋ ಒತ್ತಿ ಹೇಳಿದೆ.

ಈ ಹಿನ್ನೆಲೆಯಲ್ಲಿ ವಯಸ್ಕರಿಗೆ ಮಕ್ಕಳ ಶಿಕ್ಷಣದ ಹಕ್ಕುಗಳ ಬಗ್ಗೆ ಸಾಮಾನ್ಯ ಜ್ಞಾನವಿದೆ ಎಂದಿಟ್ಟುಕೊಳ್ಳೋಣ. ಆದರೆ ಮಕ್ಕಳಿಗೆ ತಮ್ಮ ಹಕ್ಕುಗಳ ಬಗ್ಗೆ ತಿಳಿದಿಲ್ಲ. ಮಕ್ಕಳ ಹಕ್ಕುಗಳನ್ನು ನಿರ್ಲಕ್ಷಿಸುತ್ತಾ ಬದುಕುವವರೇ ಬಹಳ ಮಂದಿ. ಹೀಗಿರುವಾಗ ನಮ್ಮ ಸುತ್ತ–ಮುತ್ತ ಎಲ್ಲಿ ನೋಡಿದರೂ ಲಕ್ಷಾಂತರ ಸಂಖ್ಯೆಯಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಶಾಲೆ ಕಾಣದ ಮಕ್ಕಳು ಯಾರದೋ ಒತ್ತಡದಿಂದಾಗಿ ಸಾಗಣೆ–ಮಾರಾಟಕ್ಕೀಡಾಗುವ, ಚಿಕ್ಕ ವಯಸ್ಸಿನಲ್ಲಿಯೇ ಬಾಲ್ಯ ಕಳೆದುಕೊಂಡು ವಯಸ್ಕರಂತೆ ಬಾಳುವ...ಪೋಷಕರ ನಿರ್ಲಕ್ಷ್ಯ, ಆರ್ಥಿಕ ದುರ್ಬಲತೆ, ಸಮುದಾಯದ ಅಸಡ್ಡೆ, ಹೀಗೆ ಯಾವುದೋ ಒಂದು ಕಾರಣದಿಂದ ಶಿಕ್ಷಣದ ಹಾದಿಯನ್ನೇ ತುಳಿಯದೆ ದೂರವಿರುವುದು ಕಟುಸತ್ಯ.

ಈ ಹಿಂದೆ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಅನುಷ್ಠಾನಗೊಳಿಸಲಾದ ಶಿಕ್ಷಣದ ನಿಲುವುಗಳು ಯಾವುದೇ ರೀತಿಯಲ್ಲಿ 6 ರಿಂದ 14 ವಯೋಮಾನದ ಮಕ್ಕಳ ಶೈಕ್ಷಣಿಕ ಹಿತಾಸಕ್ತಿಗೆ ದಕ್ಕೆಯುಂಟುಮಾಡುವ ವ್ಯಕ್ತಿ ಅಥವಾ ಸಮುದಾಯದ ವಿರುದ್ಧ ಕಾನೂನುರೀತ್ಯ ಕ್ರಮ ಜರುಗಿಸುವಂತಹ ಸ್ಪಷ್ಟ ನಿಯಮಗಳನ್ನು ರೂಪಿಸಿರಲಿಲ್ಲವೆಂಬುದೂ ಸಹ ಸತ್ಯ.

ಈ ಕಾರಣಗಳಿಂದಾಗಿ ಕೇಂದ್ರ ಸರ್ಕಾರವು ಶಿಕ್ಷಣ ಮಸೂದೆಯನ್ನು ಮಂಡಿಸಿ ಆಗಸ್ಟ್ 26. 2009 ರಂದು ರಾಷ್ಟ್ರಪತಿಗಳ ಅನುಮೋಧನೆ ಪಡೆದು ಪ್ರಕಟಿಸಿದೆ. ಇದನ್ನು ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಅಧಿನಿಯಮ 2009 ಎಂದು ಕರೆಯುತ್ತಿರುವುದು ನಿಮಗೆ ಗೊತ್ತಿರುವ ಸಂಗತಿ. ಮಕ್ಕಳಿಗೆ ಉತ್ತಮ ನಾಳೆಗಳಿಗಾಗಿ ಇಂದು ಇದರ ಅನುಷ್ಠಾನದ ಅನಿವಾರ್ಯತೆ ಇದೆ.

ರಾಷ್ಟ್ರದ ಸುಸ್ಥಿರ ಅಭಿವೃದ್ಧಿ, ವೈಯಕ್ತಿಕ ಪ್ರಗತಿ, ನಿಸರ್ಗ ಪೂರಕ ಜೀವನಕ್ಕೆ ಶಿಕ್ಷಣವೇ ತಳಹದಿಯಾದ್ದರಿಂದ ಯಾವ ಮಗುವೂ ಶಾಲೆಯಿಂದ ಹೊರಗಿದ್ದು ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳುವುದು ನಮ್ಮ ನೈತಿಕ, ವೃತ್ತಿಪರ ಹಾಗೂ ಮೂಲಭೂತ ಕರ್ತವ್ಯವಾಗಿದೆ.

# 1. ಶಾಲೆಯಿಂದ ಹೊರಗೆ ಉಳಿದ ಮಕ್ಕಳು ಮತ್ತು ಅವರ ಶಿಕ್ಷಣ

ಈಗಾಗಲೇ ಚರ್ಚಿಸಿದಂತೆ ರಾಷ್ಟ್ರದ ಸುಸ್ಥಿರ ಅಭಿವೃದ್ಧಿ, ವೈಯಕ್ತಿಕ ಪ್ರಗತಿ, ನಿಸರ್ಗ ಪೂರಕ ಜೀವನಕ್ಕೆ ಶಿಕ್ಷಣವೇ ತಳಹದಿಯಾದ್ದರಿಂದ ಯಾವ ಮಗುವೂ ಶಾಲೆಯಿಂದ ಹೊರಗಿದ್ದು ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳುವುದು ನಮ್ಮ ನೈತಿಕ, ವೃತ್ತಿಪರ ಹಾಗೂ ಮೂಲಭೂತ ಕರ್ತವ್ಯವಾಗಿದೆ. ಆದರೆ ಈಗಲೂ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ ಗಣನೀಯವಾಗಿದೆ. ಈ ಕೆಳಗಿನ ಕೋಷ್ಟಕವು ಶಾಲೆಯಿಂದ ಹೊರಗುಳಿದ ಮಕ್ಕಳ ಅಂಕಿ ಅಂಶಗಳು ಮತ್ತು ಅವುಗಳ ಗಂಭೀರತೆಯನ್ನು ಸೂಚಿಸುತ್ತದೆ.

2019–20ನೇ ಸಾಲಿನಲ್ಲಿ ಶಾಲೆಯಿಂದ ಹೊರಗುಳಿದ ವಯೋಮಾನವಾರು ಮಕ್ಕಳ ಸಂಖ್ಯೆ

| # | District | OOSC Agewise Declaration | | | | | | | | | |
|---|---|---|---|---|---|---|---|---|---|---|---|
| | | 6 to 13+ | | TOTAL | 14-15 | | TOTAL | 16+ Above | | TOTAL | Total No. of Childern |
| | | Boys | Girls | | Boys | Girls | | Boys | Girls | | |
| 1 | 2 | 4 | 5 | 6 | 7 | 8 | 9 | 10 | 11 | 12 | 13 |
| 1 | BAGALKOT | 207 | 198 | 405 | 605 | 670 | 1275 | 486 | 424 | 910 | 2590 |
| 2 | BALLARI | 609 | 652 | 1261 | 1479 | 1342 | 2821 | 0 | 0 | 0 | 4082 |
| 3 | BELAGAVI | 97 | 92 | 189 | 142 | 134 | 276 | 28 | 9 | 37 | 502 |
| 4 | BELAGAVI CHIK-KODI | 154 | 181 | 335 | 205 | 278 | 483 | 531 | 562 | 1093 | 1911 |
| 5 | BENGALURU RU-RAL | 174 | 168 | 342 | 89 | 63 | 152 | 1 | 1 | 2 | 496 |
| 6 | BENGALURU U NORTH | 38 | 45 | 83 | 1 | 2 | 3 | 0 | 0 | 0 | 86 |
| 7 | BENGALURU U SOUTH | 379 | 336 | 715 | 236 | 167 | 403 | 116 | 74 | 190 | 1308 |
| 8 | BIDAR | 64 | 83 | 147 | 88 | 94 | 182 | 26 | 28 | 54 | 383 |
| 9 | CHAMARA-JANAGARA | 191 | 151 | 342 | 572 | 401 | 973 | 334 | 186 | 520 | 1835 |
| 10 | CHIKKA-BALLAPURA | 160 | 141 | 301 | 393 | 272 | 665 | 141 | 83 | 224 | 1190 |
| 11 | CHIKKAMANGA-LURU | 328 | 228 | 556 | 553 | 323 | 876 | 343 | 205 | 548 | 1980 |
| 12 | CHITRADURGA | 99 | 74 | 173 | 340 | 281 | 621 | 53 | 52 | 105 | 899 |
| 13 | DAKSHINA KAN-NADA | 427 | 226 | 653 | 990 | 340 | 1330 | 351 | 114 | 465 | 2448 |
| 14 | DAVANAGERE | 299 | 253 | 552 | 415 | 303 | 718 | 117 | 61 | 178 | 1448 |
| 15 | DHARWAD | 277 | 270 | 547 | 464 | 367 | 831 | 187 | 93 | 280 | 1658 |
| 16 | GADAG | 200 | 188 | 388 | 347 | 273 | 620 | 142 | 101 | 243 | 1251 |
| 17 | HASSAN | 75 | 52 | 127 | 339 | 153 | 492 | 204 | 92 | 296 | 915 |
| 18 | HAVERI | 282 | 302 | 584 | 809 | 627 | 1436 | 340 | 186 | 526 | 2546 |
| 19 | KALBURGI | 1268 | 1185 | 2453 | 1250 | 1348 | 2598 | 438 | 263 | 701 | 5752 |
| 20 | KODAGU | 36 | 34 | 70 | 64 | 64 | 128 | 149 | 76 | 225 | 423 |
| 21 | KOLAR | 334 | 280 | 614 | 362 | 258 | 620 | 172 | 53 | 225 | 1459 |
| 22 | KOPPAL | 145 | 94 | 239 | 311 | 251 | 562 | 136 | 80 | 216 | 1017 |
| 23 | MANDYA | 213 | 173 | 386 | 372 | 213 | 585 | 60 | 26 | 86 | 1057 |
| 24 | MYSURU | 542 | 400 | 942 | 951 | 655 | 1606 | 464 | 278 | 742 | 3290 |
| 25 | RAICHUR | 240 | 262 | 502 | 215 | 217 | 432 | 0 | 0 | 0 | 934 |
| 26 | RAMANAGARA | 294 | 205 | 499 | 274 | 201 | 475 | 366 | 222 | 588 | 1562 |
| 27 | SHIVAMOGGA | 71 | 47 | 118 | 322 | 194 | 516 | 366 | 172 | 538 | 1172 |
| 28 | TUMAKURU | 29 | 12 | 41 | 128 | 56 | 184 | 14 | 6 | 20 | 245 |

| | | | | | | | | | | | |
|---|---|---|---|---|---|---|---|---|---|---|---|
| 29 | TUMAKURU MADHUGIRI | 23 | 25 | 48 | 136 | 74 | 210 | 27 | 10 | 37 | 295 |
| 30 | UDUPI | 37 | 15 | 52 | 187 | 86 | 273 | 253 | 103 | 356 | 681 |
| 31 | UTTARA KANNADA | 104 | 80 | 184 | 267 | 133 | 400 | 186 | 93 | 279 | 863 |
| 32 | UTTARA KANNADA SIRSI | 94 | 70 | 164 | 301 | 179 | 480 | 116 | 42 | 158 | 802 |
| 33 | VIJAYAPURA | 916 | 806 | 1722 | 1004 | 1284 | 2288 | 262 | 161 | 423 | 4433 |
| 34 | YADAGIRI | 599 | 520 | 1119 | 1422 | 1547 | 2969 | 975 | 758 | 1733 | 5821 |
| Total | 9005 | 7848 | 16853 | 15633 | 12850 | 28483 | 7384 | 4614 | 11998 | 57334 | |

ಇಷ್ಟು ಮಕ್ಕಳು ಶಾಲೆಯಿಂದ ಹೊರಗುಳಿಯಲು ನಾವೆಷ್ಟು ಕಾರಣ ಎಂಬ ಆತ್ಮಾವಲೋಕನ ಮತ್ತು ನಮ್ಮ ಕರ್ತವ್ಯದಲ್ಲಾದ ಲೋಪಗಳನ್ನೂ ಗುರುತಿಸಿಕೊಳ್ಳಬೇಕಿದೆ.

ಶಾಲೆಯಿಂದ ಹೊರಗೆ ಉಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರುವುದು ಪ್ರಾಥಮಿಕ ಶಿಕ್ಷಣದ ಬಹಳ ಮುಖ್ಯವಾದ ಜವಾಬ್ದಾರಿಯಾಗಿದೆ. ಶಾಲೆಗೆ ದಾಖಲಾಗುವ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ಒದಗಿಸಿ ಅವರು ತಮ್ಮ ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳುವಂತೆ ಮಾಡುವುದು ಶಿಕ್ಷಣ ಕ್ಷೇತ್ರದ ಎಲ್ಲಾ ಭಾಗೀದಾರರ ಆದ್ಯ ಕರ್ತವ್ಯವಾಗಿದೆ. ಕಲಿಕೆಯಲ್ಲಿ ಗುಣಮಟ್ಟವನ್ನು ಸಾಧಿಸಲು ನಿರಂತರ ಹಾಜರಾತಿ ಅತೀ ಮುಖ್ಯ.

ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ನಿರಂತರವಾಗಿ ರೂಪಿಸಿ ಜಾರಿಗೆ ತರಲಾಗುತ್ತಿದೆ. ಇದರಿಂದ ಶಾಲೆಗಳಲ್ಲಿ ದಾಖಲಾತಿ ಪ್ರಮಾಣ ಹೆಚ್ಚಾಗಿರುವುದನ್ನು ಗಮನಿಸಿದ್ದೇವೆ. ಶಾಲೆಗೆ ಬರುವ ಮಕ್ಕಳ ಹಾಜರಾತಿಯನ್ನು ನಿರಂತರವಾಗಿ ಕಾಯ್ದುಕೊಳ್ಳಲು ಹಲವಾರು ಪ್ರೋತ್ಸಾಹದಾಯಕ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಇವೆಲ್ಲದರ ನಡುವೆಯೂ ವಿವಿಧ ಕಾರಣಗಳಿಗಳಿಂದಾಗಿ ಮಕ್ಕಳು ಶಾಲೆಯಿಂದ ಹೊರಗುಳಿಯುತ್ತಿರುವುದು ಕಂಡುಬರುತ್ತಿದೆ.

ಶಾಲೆಯಿಂದ ಹೊರಗೆ ಇರುವವರಲ್ಲಿ 2 ವಿಧ. 1. ಶಾಲೆಗೆ ಸೇರದವರು 2. ಶಾಲೆ ಸೇರಿ ಬಿಟ್ಟವರು. ಇವರು 7 ರಿಂದ 14 (13+) ವಯೋಮಾನದ ಗುಂಪಿಗೆ ಸೇರಿದವರಾಗಿರುತ್ತಾರೆ. ಶಾಲೆಯಿಂದ ಹೊರಗುಳಿಯಲು ಕಾರಣಗಳು ಹಲವಾರು. ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಡಲು ಹಲವಾರು ಕಾರಣಗಳಿವೆ. ಶಾಲಾ ಸಂಬಂಧಿತ ಅಂಶಗಳು, ಪೋಷಕ ಸಂಬಂಧಿತ ಅಂಶಗಳು ಹಾಗೂ ಇತರೆ ಅಂಶಗಳು. ಬಡತನ, ಪೋಷಕರ ನಿರಾಸಕ್ತಿ, ಸಾಮಾಜಿಕ ಅಂಶಗಳು, ವಲಸೆ ಇತ್ಯಾದಿ ಅಂಶಗಳು ಮಕ್ಕಳ ಶಾಲಾ ಶಿಕ್ಷಣದ ಮೇಲೆ ನೇರವಾದ ಪ್ರಭಾವವನ್ನು ಬೀರುತ್ತವೆ. **(ಸದರಿ ಕಾರಣಗಳನ್ನು ಅನುಬಂಧದಲ್ಲಿ ಉಲ್ಲೇಖಿಸಲಾಗಿದ್ದು ಅವುಗಳ ಔಚಿತ್ಯವನ್ನೊಮ್ಮೆ ಚರ್ಚಿಸಿರಿ)**

ರಾಷ್ಟ್ರೀಯ ಪಠ್ಯಕ್ರಮ ನೆಲಗಟ್ಟು, ನೂತನ ಶಿಕ್ಷಣ ಕರಡು ನೀತಿ 2019 ಮತ್ತು ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯ್ದೆಗಳು ಮಕ್ಕಳು ಶಾಲೆಯಿಂದ ಹೊರಗುಳಿಯದಂತೆ ಕೈಗೊಳ್ಳಬೇಕಾದ ಕ್ರಮಗಳು ಮತ್ತು ವಿವಿಧ ಹಂತದ ಅಧಿಕಾರಿಗಳ ಕರ್ತವ್ಯಗಳನ್ನು ಉಲ್ಲೇಖಿಸಿವೆ. ಅದರಂತೆ ನಾವೆಲ್ಲರೂ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

ಶಾಲೆಯಿಂದ ಹೊರಗುಳಿದ ಮಕ್ಕಳ ಬಗ್ಗೆ ದಿನಾಂಕ 23–07–2019ರಲ್ಲಿ ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯವು ಆದೇಶವನ್ನು ನೀಡಿದೆ. ಶಾಲೆಯಿಂದ ಹೊರಗುಳಿದಿರುವ ಮಕ್ಕಳ ಬಗ್ಗೆ ಹಾಜರಾತಿ ಅಧಿಕಾರಿಗಳಾದ ಶಿಕ್ಷಣ ಸಂಯೋಜಕರು ಸಂಗ್ರಹಿಸಿ ಶಾಲೆಗಳ ಮುಖ್ಯ ಶಿಕ್ಷಕರು ಹಾಗೂ ಇತರೆ ಭಾಗೀದಾರರು ಆ ಮಕ್ಕಳನ್ನು ಮುಖ್ಯವಾಹಿನಿಗೆ ಕರೆತರುವ ಪ್ರಯತ್ನಗಳನ್ನು ಗಂಭೀರವಾಗಿ ಮಾಡಬೇಕಾಗಿದೆ. ಶಾಲೆಯಿಂದ ನಿರಂತರವಾಗಿ 7 ದಿನಗಳ ಕಾಲ ಹೊರಗುಳಿಯುವ ಮಕ್ಕಳನ್ನು 'ಶಾಲೆ ಬಿಟ್ಟ ಮಕ್ಕಳು' ಎಂಬುದಾಗಿ ಪರಿಗಣಿಸಿ, ಅವರನ್ನು ಶಾಲೆಗೆ ದಾಖಲಿಸಲು ಅಗತ್ಯ ಕ್ರಮಗಳನ್ನು ಜರೂರಾಗಿ ಕೈಗೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಶಿಕ್ಷಣ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿರುವ ಎಲ್ಲರಿಗೆ ಒಂದು ದಿನದ ಕಾರ್ಯಾಗಾರವನ್ನು ನಡೆಸಿ, ಅವರುಗಳು ಶಾಲಾ ಬಿಟ್ಟ ಮಕ್ಕಳ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳನ್ನು ಮನವರಿಕೆ ಮಾಡಿಕೊಟ್ಟು, ಮುಂದಿನ ದಿನಗಳಲ್ಲಿ ಶಾಲೆ ಬಿಟ್ಟ ಮಕ್ಕಳು ತಮ್ಮ ವ್ಯಾಪ್ತಿಯಲ್ಲಿ ಇರದಂತೆ ಕಾರ್ಯನಿರ್ವಹಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಮಾಡಲಾಗುತ್ತಿದೆ.

## 2. ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣಕ್ಕಾಗಿ ಆಯೋಜಿಸಿರುವ ಕಾರ್ಯಕ್ರಮಗಳು

06 ರಿಂದ 14 ವರ್ಷದ ಪ್ರತಿಯೊಬ್ಬರಿಗೂ ಶಿಕ್ಷಣದ ಅವಕಾಶಗಳನ್ನು ಒದಗಿಸುವುದನ್ನು ಸಾರ್ವತ್ರಿಕ ಅವಕಾಶಗಳೆನ್ನುತ್ತೇವೆ. ಈ ಕೆಳಕಂಡ ಶಿಕ್ಷಣದ ಸಾರ್ವತ್ರಿಕತೆ ಈ ಕೆಳಕಂಡ ಅವಕಾಶಗಳಿರುತ್ತವೆ.

★ ಪ್ರತಿಶತ 96ಕ್ಕಿಂತ ಹೆಚ್ಚಿನ ಹಳ್ಳಿ/ಜನವಸತಿ ಪ್ರದೇಶಗಳಲ್ಲಿ ಕಿರಿಯ ಪ್ರಾಥಮಿಕ ಶಾಲೆಗಳನ್ನು ತೆರೆಯಲಾಗಿದೆ.

★ ಔಪಚಾರಿಕ ಶಾಲೆಗಳಿಗೆ ದಾಖಲಾಗದ ಮಕ್ಕಳಿಗೆ ಅವಕಾಶ ಕಲ್ಪಿಸುವ ಸಲುವಾಗಿ ಪರ್ಯಾಯ ಶಿಕ್ಷಣ ವ್ಯವಸ್ಥೆ ಕಲ್ಪಿಸಲಾಗಿದೆ.

★ ಕಿರಿಯ ಪ್ರಾಥಮಿಕ ಶಿಕ್ಷಣವನ್ನು ಪೂರೈಸುವ ಮಕ್ಕಳ ಸಂಖ್ಯೆಯನ್ನಾದರಿತ ಅಗತ್ಯತೆಗನುಗುಣವಾಗಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ತೆರೆಯಲಾಗಿದೆ.

★ ಜನವಸತಿ ಪ್ರದೇಶಗಳಲ್ಲಿ 1 ಕಿ.ಮೀ ವ್ಯಾಪ್ತಿಯಲ್ಲಿ ಸರ್ಕಾರಿ ಶಾಲೆ ಇಲ್ಲದಿದ್ದಲ್ಲಿ ಹಾಗೂ 10ಕ್ಕಿಂತ ಹೆಚ್ಚು ಶಾಲಾ ವಯಸ್ಸಿನ ಮಕ್ಕಳಿರುವ ಜನವಸತಿ ಪ್ರದೇಶಗಳಲ್ಲಿ ಹೊಸ ಶಾಲೆಗಳನ್ನು ತೆರೆಯಲಾಗಿದೆ.

★ ಹತ್ತಿರದ ಹಿರಿಯ ಪ್ರಾಥಮಿಕ ಶಾಲೆ 3 ಕಿ.ಮೀ ಗಿಂತ ದೂರದಲ್ಲಿ ಅಂತಹ ಜನವಸತಿ ಪ್ರದೇಶದ ಕಿರಿಯ ಪ್ರಾಥಮಿಕ ಶಾಲೆಯ 5ನೇ ಇಯತ್ತೆಯಲ್ಲಿ ತೇರ್ಗಡೆಯಾದ ಮಕ್ಕಳ ಸಂಖ್ಯೆ 15 ಮೀರಿದರೆ ಅಂತಹ ಕಿರಿಯ ಪ್ರಾಥಮಿಕ ಶಾಲೆಯನ್ನು ಹಿರಿಯ ಪ್ರಾಥಮಿಕ ಶಾಲೆಯನ್ನಾಗಿ ಪರಿವರ್ತಿಸಲಾಗುತ್ತದೆ.

★ ಎಲ್ಲ ಸರ್ಕಾರಿ ಶಾಲೆಗಳಿಗೆ ಕುಡಿಯುವ ನೀರು, ಶೌಚಾಲಯ, ವಿದ್ಯುತ್, ಶಾಲಾ ಕಾಂಪೌಂಡ್, ಆಟದ ಮೈದಾನ ಮತ್ತು ಇತರೆ ಸೌಲಭ್ಯಗಳಿಗೆ ವಿವಿಧ ಯೋಜನೆಯಡಿಯಲ್ಲಿ ಅನುದಾನ ನೀಡಲಾಗುತ್ತಿದೆ.

★ ಶಾಲಾ ಕಟ್ಟಡ ನಿರ್ಮಾಣ ಹಾಗೂ ದುರಸ್ತಿ ಕಾರ್ಯಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.

★ ಶಾಲಾ ಕಟ್ಟಡದ ಸಮರ್ಪಕ ನಿರ್ವಹಣೆಗೆ ಸುಣ್ಣ ಬಣ್ಣ, ಕೈತೋಟ ನಿರ್ವಹಣೆ ಮುಂತಾದ ಕೆಲಸಗಳಿಗೆ ಪ್ರತಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಿಗೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

★ ವಿಶೇಷ ಅಗತ್ಯತೆಯುಳ್ಳ ಮಕ್ಕಳ ಅನುಕೂಲಕ್ಕಾಗಿ ವಿಶೇಷ ಕೊಠಡಿ ವ್ಯವಸ್ಥೆ ಮತ್ತು ರ್‍ಯಾಂಪ್ ವ್ಯವಸ್ಥೆ ಮಾಡಿಕೊಡಲಾಗುತ್ತಿದೆ.

**ಸಾರ್ವತ್ರಿಕ ದಾಖಲಾತಿ**

'ಅರ್ಹ ವಯಸ್ಸಿನ ಎಲ್ಲಾ ಮಕ್ಕಳನ್ನು ಶಾಲೆಗೆ ದಾಖಲಿಸುವುದೇ ಸಾರ್ವತ್ರಿಕ ದಾಖಲಾತಿ'

**ಸಾರ್ವತ್ರಿಕ ದಾಖಲಾತಿಗಳಿಗೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳು**

**ಮಕ್ಕಳ ಗಣತಿ:** 1961ರ "ಕಡ್ಡಾಯ ಪ್ರಾಥಮಿಕ ಶಿಕ್ಷಣ" ಕಾಯಿದೆಯನ್ವಯ 1963 ರಿಂದಲೂ ಪ್ರತಿ ವರ್ಷ ಮಕ್ಕಳ ಗಣತಿಯನ್ನು ಮಾಡಲಾಗುವುದು. ನವಜಾತಿ ಶಿಶುವಿನಿಂದ 16 ವರ್ಷ ವಯಸ್ಸಿನವರೆಗಿನ ಮಕ್ಕಳನ್ನು ಗಣತಿ ಮಾಡಲಾಗುವುದು.ಈ ಸಮೀಕ್ಷೆಯಲ್ಲಿ ಶಾಲಾ ವಯೋಮಾನದ, ಶಾಲೆ ಬಿಟ್ಟ, ಶಾಲೆಯಲ್ಲಿರುವ ಅಂಗವಿಕಲ, ವಲಸೆ, ಕೊಳಚೆ ಪ್ರದೇಶಗಳ ಮಕ್ಕಳ ಬಗ್ಗೆ ಸಮಗ್ರ ಮಾಹಿತಿ ಸಂಗ್ರಹಿಸಲಾಗುವುದು.

★ **ದಾಖಲಾತಿ ಆಂದೋಲನ:** ಮಕ್ಕಳ ಗಣತಿಯ ಪ್ರಕಾರ ಜೂನ್ ತಿಂಗಳಲ್ಲಿ ಶಾಲೆಗೆ ದಾಖಲು ಮಾಡಿಕೊಳ್ಳಲು ದಾಖಲಾತಿ ಆಂದೋಲನ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು.

★ **ವಿಶೇಷ ದಾಖಲಾತಿ ಆಂದೋಲನ:** ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯ ವಾಹಿನಿಗೆ ತರಲು ಹಮ್ಮಿಕೊಂಡಿರುವ ಅನೇಕ ಕಾರ್ಯ ತಂತ್ರಗಳು ನೆರವಾಗುತ್ತಿವೆ. ಈ ಕಾರ್ಯತಂತ್ರಗಳನ್ನು ಹೊರತುಪಡಿಸಿ, ಇನ್ನೂ ಅನೇಕ ಕಾರಣಗಳಿಂದ ಮಗು ಶಾಲೆಯಿಂದ ಹೊರಗುಳಿಯುವ ಸಂಭವಗಳು ಇದ್ದು ಇಂತಹ ಮಕ್ಕಳನ್ನು ಮುಖ್ಯವಾಹಿನಿಗೆ ತರುವ ಪ್ರಯತ್ನವೇ ವಿಶೇಷ ದಾಖಲಾತಿ ಆಂದೋಲನ.

★ **ಬಾ ಮರಳಿ ಶಾಲೆಗೆ:** ವಿವಿಧ ಕಾರಣಗಳಿಂದ ಶಾಲೆ ತೊರೆದ ಹಾಗೂ ಅನಿಯಮಿತವಾಗಿ ಗೈರು ಹಾಜರಾಗುತ್ತಿರುವ 6 ರಿಂದ 14 ವಯಸ್ಸಿನ ಮಕ್ಕಳನ್ನು ಪುನಃ ಶಾಲೆಗೆ ಕರೆತಂದು ಶಿಕ್ಷಣ ಅವಕಾಶ ಕಲ್ಪಿಸಲು 2002ನೇಯ ಶೈಕ್ಷಣಿಕ ಸಾಲಿನಿಂದ ಆರಂಭಿಸಲಾಗಿದೆ. ಎಸ್.ಡಿ.ಎಂ.ಸಿ. ಸದಸ್ಯರ ಜೊತೆ ಮಕ್ಕಳ ಮನೆಗಳಿಗೆ ಭೇಟಿನೀಡಿ ಮುಖ್ಯವಾಹಿನಿಗೆ ಕರೆತರುವ ಕಾರ್ಯಕ್ರಮ ಇದಾಗಿದೆ.

★ **ಕೂಲಿಯಿಂದ ಶಾಲೆಗೆ:** ಶಿಕ್ಷಣ ಮೂಲಭೂತ ಹಕ್ಕು ಎಲ್ಲಾ ಮಕ್ಕಳಿಗೆ ಶಿಕ್ಷಣ ನೀಡುವುದು ನಮ್ಮ ಕರ್ತವ್ಯವಾಗಿದೆ. ಶಿಕ್ಷಣ ಇಲಾಖೆ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಮಕ್ಕಳನ್ನು ಕೂಲಿಯ ತಾಣಗಳಿಂದ ಬಿಡಿಸಿ ಮುಖ್ಯವಾಹಿನಿಗೆ ತರುವ ಕಾರ್ಯಕ್ರಮ ಇದಾಗಿದೆ.

★ **ಬಾ ಬಾಲೆ ಶಾಲೆಗೆ:** ಸಮೀಕ್ಷೆಗಳ ಪ್ರಕಾರ ಶಾಲೆಯಿಂದ ಹೊರಗಿರುವ ಮಕ್ಕಳಲ್ಲಿ ಬಾಲಕರಿಗಿಂತ ಬಾಲಕಿಯರೇ

ಹೆಚ್ಚಾಗಿರುವುದು ದೃಢಪಟ್ಟಿದೆ. ಶಾಲೆಯ ಹೊರಗಿರುವ ಬಾಲಕಿಯರನ್ನು ಶಾಲೆಗೆ ಕರೆತರುವ ಕಾರ್ಯತಂತ್ರವಾಗಿದೆ.

★ **ಸಂಚಾರಿ ಶಾಲೆ:** ಸಂಚಾರಿ ಶಾಲೆಯು ಒಂದು ನೂತನ ಮಾದರಿ ಯೋಜನೆಯಾಗಿದೆ. ಈ ಕಾರ್ಯಕ್ರಮವು 1999 ರಿಂದ ಜಾರಿಗೆ ಬಂದಿದೆ. ಶಾಲಾ ಅರ್ಹ ವಯಸ್ಸಿನ ಮಕ್ಕಳ ಹತ್ತಿರ ಹೋಗಬಾರದೇಕೆ? ಎಂಬ ಪ್ರಶ್ನೆಗೆ ಉತ್ತರವಾಗಿ ಮತ್ತು ಮಕ್ಕಳಿರುವ ಸ್ಥಳದಲ್ಲಿ ಶಾಲೆ ತೆರೆಯಲು ಅಸಾಧ್ಯವಾದಾಗ ಅಂತಹ ಮಕ್ಕಳಿಗೆ ಶಿಕ್ಷಣ ಕೊಡಲು ಹತ್ತಿರದ ಶಾಲೆಗೆ ಸಾಗಿಸುವ ವ್ಯವಸ್ಥೆಯನ್ನು ಕಲ್ಪಿಸುವುದಾಗಿದೆ. ಹಾಗೂ ಸಂಚಾರಿ ಶಾಲೆಯ ಬಸ್ಸಿನಲ್ಲಿಯೇ ತರಗತಿ ನಡೆಸಲು ಅನುಕೂಲವಾಗುವಂತೆ, ಬಸ್ಸಿನಲ್ಲಿಯೇ ವ್ಯವಸ್ಥೆಯನ್ನು ಕಲ್ಪಿಸುವುದಾಗಿದೆ.

★ **ಟೆಂಟ್ ಶಾಲೆ:** ಜೀವನೋಪಾಯಕ್ಕಾಗಿ ಜನರು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುತ್ತಾರೆ. ವಲಸೆ ಹೋಗುವ ಜನ ತಮ್ಮೊಂದಿಗೆ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳನ್ನೂ ಕರೆದೊಯ್ಯುತ್ತಾರೆ. ವಿದ್ಯಾರ್ಥಿಗಳ ಕಲಿಕೆಯ ಮೇಲೆ ವಲಸೆ ಪ್ರತಿಕೂಲ ಪರಿಣಾಮ ಬೀರುತ್ತದೆ. ವಲಸೆ ಸಂದರ್ಭಗಳಲ್ಲಿ ಶಾಲೆಯನ್ನು ಮಧ್ಯದಲ್ಲಿಯೇ ಬಿಡುವವರ ಸಂಖ್ಯೆ ಮತ್ತು ದೀರ್ಘ ಗೈರುಹಾಜರಿ ಹೆಚ್ಚಾಗುತ್ತದೆ. ಈ ಸಮಸ್ಯೆಯನ್ನು ನಿಯಂತ್ರಿಸಲು "ಎಲ್ಲಿ ವಲಸೆಯೋ ಅಲ್ಲಿ ಶಾಲೆ" ಎಂಬ ತತ್ವದ ಆಧಾರದ ಮೇಲೆ ಟೆಂಟ್ ಶಾಲೆಗಳನ್ನು ತೆರೆಯಲಾಗಿದೆ.

★ **ಚಿಣ್ಣರ ಅಂಗಳ:** ಶಾಲೆಯಿಂದ ಹೊರಗುಳಿದ ಮಕ್ಕಳು ಹಾಗೂ  ಮಧ್ಯದಲ್ಲಿಯೇ ಶಾಲೆಯನ್ನು ಬಿಟ್ಟ ಮಕ್ಕಳಿಗೆ 60 ದಿನಗಳ 'ಸೇತುಬಂಧ' ಕಾರ್ಯಕ್ರಮ ಹಮ್ಮಿಕೊಂಡು ಮೌಲ್ಯಮಾಪನ ಮಾಡಿ ನಂತರ ಅವರ ಕಲಿಕಾ ಮಟ್ಟಕ್ಕೆ ತಕ್ಕಂತೆ ವಿವಿಧ ವರ್ಗಗಳಿಗೆ ದಾಖಲಿಸಿ ಮುಖ್ಯವಾಹಿನಿಗೆ ತರುವುದು. ಇದು ವಸತಿ ಸಹಿತ ಮತ್ತು ವಸತಿರಹಿತ ಎರಡು ರೂಪದಲ್ಲಿರುತ್ತದೆ.

★ **ಆರು ತಿಂಗಳ ವಸತಿ ರಹಿತ ಬ್ರಿಡ್ಜ್‌ಕೋರ್ಸ್:**

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರುವ ಪ್ರಯತ್ನದಲ್ಲಿ ಮಗು ತಾನು ಕಲಿತಿದ್ದನ್ನು ಮರೆತಿದ್ದರೆ, ಈಗ ಶಾಲೆಗೆ ಹೋದರೆ ಕಲಿತ ಮಕ್ಕಳೊಂದಿಗೆ ವ್ಯವಹರಿಸಲು ಅಥವಾ ಅವರ ಸಮಾನವಾಗಿ ಕಲಿಯಲು ಹೇಗೆ ಸಾಧ್ಯ?– ಎನ್ನುವ ಕಾರಣಕ್ಕೆ ಶಾಲೆಗೆ ಬರಲು ಮಗು ಹಿಂಜರಿಯುತ್ತದೆ.ಇಂತಹವರಿಗೆ 2 ತಿಂಗಳ ಬ್ರಿಡ್ಜ್‌ಕೋರ್ಸ್ ಸಾಲದಾದಾಗ 6 ತಿಂಗಳ ಶಿಕ್ಷಣ ನೀಡಿದರೆ ಮಗು ತಾನುಗಳಿಸಿರುವ ಸಾಮರ್ಥ್ಯಗಳನ್ನು ಪುನಃ ಸ್ಮರಿಸಿ ಮುಂದಿನ ಸಾಮರ್ಥ್ಯಗಳಿಸಲು ನೆರವಾಗುವ ಕಾರ್ಯತಂತ್ರವಾಗಿದೆ. 2007–08ನೇ ಸಾಲಿನಲ್ಲಿ ಇದರ ಕಾಲಾವಧಿಯನ್ನು 12 ತಿಂಗಳಿಗೆ ವಿಸ್ತರಿಸಲಾಗಿದೆ.

★ **12 ತಿಂಗಳ ವಸತಿರಹಿತ ಬ್ರಿಡ್ಜ್‌ಕೋರ್ಸ್:**

ಜನವಸತಿ ಪ್ರದೇಶದಲ್ಲಿ 1 ಕಿ.ಮೀ. ವ್ಯಾಪ್ತಿಯಲ್ಲಿ ಪ್ರಾಥಮಿಕ ಶಾಲೆ, 3 ಕಿ.ಮೀ. ವ್ಯಾಪ್ತಿಯಲ್ಲಿ ಹಿರಿಯ ಪ್ರಾಥಮಿಕ ಶಾಲಾ ಸೌಲಭ್ಯ ಇಲ್ಲದಿದ್ದು, ಜನವಸತಿಯ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರುವ ಕಾರ್ಯತಂತ್ರವಾಗಿದೆ.

★ **12 ತಿಂಗಳ ವಸತಿಯುತ ಚಿಣ್ಣರ ಅಂಗಳ ಸೇತುಬಂಧ:**

ಈ ಕಾರ್ಯತಂತ್ರವು ಶಾಲೆಗೆ ಸೇರಿದ ಮಗು ಶಾಲೆ ತೊರೆಯದೆ ಶಾಲೆಯಲ್ಲಿ ಉಳಿಯುವಂತೆ ಮಾಡಲು ಯೋಜಿಸಲ್ಪಟ್ಟಿದೆ.ಪರ್ಯಾಯ ಶಿಕ್ಷಣ ಕೈಪಿಡಿಯಲ್ಲಿ ಇದನ್ನು ಆಶಾಕಿರಣ ಎಂದು ಸಂಬೋಧಿಸಿದೆ.ಈ ಕೇಂದ್ರಗಳಲ್ಲಿ ಹಾಸ್ಟೆಲ್ ಸೌಲಭ್ಯ ನೀಡಲಾಗುತ್ತದೆ.ಪಾಠ ಪ್ರವಚಗಳಿಗೆ ಮಗು ಶಾಲೆಗೆ ಹಾಜರಾಗುತ್ತದೆ.

★ **6 ತಿಂಗಳ ಋತುಮಾನ ವಸತಿಯುತ ಚಿಣ್ಣರ ಅಂಗಳ ಕೇಂದ್ರಗಳು:**

ಇವು ಈ ಹಿಂದೆ ಅಸ್ತಿತ್ವದಲ್ಲಿದ್ದ 4 ತಿಂಗಳ ಋತುಮಾನ ವಸತಿಯುತ ಸೇತುಬಂಧ ಕೇಂದ್ರಗಳಂತೆ ಕಾರ್ಯನಿರ್ವಹಿಸುತ್ತದೆ. ವಲಸೆ ಹೋಗುವ ಪ್ರದೇಶದಲ್ಲಿ ವಲಸಿತ ಕುಟುಂಬಗಳೊಂದಿಗೆ ಮಕ್ಕಳು ಹೋಗಿ ಅವರ ವಿದ್ಯಾಭ್ಯಾಸ ಕುಂಠಿತವಾಗಬಾರದು ಎಂದು ಇವುಗಳ್ನು ತೆರೆಯಲಾಗುತ್ತದೆ.

★ **NCLP ಶಾಲೆಗಳು:**

ಈ ಶಾಲೆಗಳನ್ನು ಕೇಂದ್ರ ಸರ್ಕಾರದ ಧನಸಹಾಯದಿಂದ ರಾಜ್ಯ ಕಾರ್ಮಿಕ ಇಲಾಖೆ ಜಿಲ್ಲಾಧಿಕಾರಿಗಳ ಮೂಲಕ ನಡೆಸುತ್ತಿದೆ. ಇವು ವಸತಿರಹಿತ 12 ತಿಂಗಳ ಸೇತುಬಂಧ ಕೇಂದ್ರಗಳಾಗಿವೆ.

(ಸೂಚನೆ : ಹೆಚ್ಚಿನ ಮಾಹಿತಿಗಾಗಿ ಪರ್ಯಾಯ ಶಿಕ್ಷಣ ಕೈಪಿಡಿ ಪರಾಮರ್ಶಿಸಿರಿ)

**ಸಾರ್ವತ್ರಿಕ ಉಳಿಕೆ:**

ಶಾಲೆಗೆ ದಾಖಲಾದ ಎಲ್ಲಾ ಮಕ್ಕಳು ಶಾಲೆಯಲ್ಲಿಯೇ ಉಳಿಯುವಂತೆ ಮಾಡುವುದು ಮಹತ್ವದ ಅಂಶವಾಗಿದೆ.ಆದರೆ, ಹಲವಾರು ಮಕ್ಕಳು ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಕಾರಣಗಳಿಂದಾಗಿ ಮಧ್ಯದಲ್ಲಿ ಶಾಲೆಯನ್ನು ಬಿಡುವುದು ಕಂಡು ಬರುತ್ತದೆ.ಇಂತಹ ಮಕ್ಕಳನ್ನು ಶಾಲೆಯಲ್ಲಿ ಉಳಿಸಿ ಗುಣಾತ್ಮಕ ಶಿಕ್ಷಣ ಒದಗಿಸುವ ದೃಷ್ಟಿಯಿಂದ ಸರ್ಕಾರದ ಅನೇಕ ಯೋಜನೆ, ಕಾರ್ಯಕ್ರಮಗಳ ಮೂಲಕ ಮಕ್ಕಳಿಗಾಗಿ ವಿವಿಧ ಸವಲತ್ತುಗಳನ್ನು ನೀಡುತ್ತದೆ.

★ **ಉಚಿತ ಪಠ್ಯಪುಸ್ತಕ ಮತ್ತು ಸಮವಸ್ತ್ರ:**

ಸರ್ಕಾರಿ ಶಾಲೆಯ 1 ರಿಂದ 10ನೇ ತರಗತಿಯವರೆಗಿನ ಎಲ್ಲಾ ವಿದ್ಯಾರ್ಥಿಗಳಿಗೆ ಮತ್ತು ಅನುದಾನಿತ ಶಾಲೆಗಳಲ್ಲಿ 1 ರಿಂದ 8ನೇ ತರಗತಿಯವರೆಗಿನ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ ಮತ್ತು ಸಮವಸ್ತ್ರ ನೀಡಲಾಗುತ್ತಿದೆ.

★ **ಅಕ್ಷರ ದಾಸೋಹ:**

ಒಂದರಿಂದ ಎಂಟನೇ (1–8) ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಸರ್ಕಾರಿ ಮತ್ತು ಅನುದಾನಿತ ಶಾಲಾ ವಿದ್ಯಾರ್ಥಿಗಳಿಗೆ ಅಕ್ಷರದಾಸೋಹ ಯೋಜನೆಯಲ್ಲಿ ಮಧ್ಯಾಹ್ನ ಬಿಸಿಯೂಟ ವ್ಯವಸ್ಥೆ ಮಾಡಲಾಗಿದೆ.

★ **ಉಚಿತ ಬ್ಯಾಗ್ ಮತ್ತು ನೋಟ್ ಪುಸ್ತಕ:**

5 ಮತ್ತು 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪ. ವರ್ಗದ ಎಲ್ಲಾ ಮಕ್ಕಳಿಗೆ ಬ್ಯಾಗ್ ಮತ್ತು 5, 6 ಮತ್ತು 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾತಿ/ಪ.ವರ್ಗದ ಮಕ್ಕಳಿಗೆ ಉಚಿತ ನೋಟ್ ಪುಸ್ತುಕ ನೀಡಲಾಗುತ್ತಿದೆ.

★ **ವಿದ್ಯಾರ್ಥಿ ವೇತನ:**

- ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಸೌಲಭ್ಯ.
- ಹಿಂದುಳಿದ, ಅಲ್ಪ ಸಂಖ್ಯಾತ / ಪ.ಜಾತಿ / ಪ.ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ.
- ಅಂಗವಿಕಲ ಮಕ್ಕಳಿಗೆ ವಿದ್ಯಾರ್ಥಿವೇತನ.
- ಗ್ರಾಮೀಣ ಹೆಣ್ಣು ಮಕ್ಕಳ ಹಾಜರಾತಿ ವಿದ್ಯಾರ್ಥಿವೇತನ. ಇದನ್ನು 5 ರಿಂದ 10ನೇ ತರಗತಿಯ ಹೆಣ್ಣು ಮಕ್ಕಳಿಗೆ ವಿದ್ಯಾರ್ಥಿವೇತನ ನೀಡಲಾಗುತ್ತದೆ.

★ **ಉಚಿತ ವಿದ್ಯಾರ್ಥಿನಿಲಯ:**

ಪ.ಜಾತಿ / ಪ.ವರ್ಗದ ಮತ್ತು ಇತರೆ ಹಿಂದುಳಿದ ವರ್ಗದ ಮಕ್ಕಳಿಗೆ ಉಚಿತ ವಸತಿ ನಿಲಯಗಳ ಸೌಲಭ್ಯ ಹಾಗೂ ವಿಶೇಷ ಬೋಧನಾ ವ್ಯವಸ್ಥೆ ಮಾಡಲಾಗಿದೆ.

★ **ವೈದ್ಯಕೀಯ ತಪಾಸಣೆ ಮತ್ತು ಸುವರ್ಣ ಆರೋಗ್ಯ ತಪಾಸಣೆ**

ಪ್ರತಿ ವರ್ಷವೂ ಮಕ್ಕಳ ವೈದ್ಯಕೀಯ ತಪಾಸಣೆ ಮಾಡುವುದು ಅಲ್ಲದೆ ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಒಂದು ತಿಂಗಳು ಸುವರ್ಣ ಆರೋಗ್ಯ ತಪಾಸಣೆ ಮಾಡಲಾಗುತ್ತಿದೆ.

★ **ಉಚಿತ ಸೈಕಲ್ ವಿತರಣೆ:**

ನಗರ ಪಾಲಿಕರವ್ಯಾಪ್ತಿಯನ್ನು ಹೊರತುಪಡಿಸಿ ಉಳಿದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 8ನೇ ತರಗತಿಯ ವಿದ್ಯಾರ್ಥಿಗಳಿಗೆ ಉಚಿತ ಸೈಕಲ್ ವಿತರಣೆ ಮಾಡಲಾಗುವುದು.

★ **ಪ್ರತಿಭಾ ಕಾರಂಜಿ:**

ಪ್ರತಿಭಾ ಕಾರಂಜಿ ಕಾರ್ಯಕ್ರಮಗಳ ಮೂಲಕ ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆಯನ್ನು ವಿವಿಧ ಸ್ಪರ್ಧೆಗಳ ಮೂಲಕ ಹೊರತರಲಾಗುವುದು. (ಶಾಲಾಮಟ್ಟದಿಂದ ರಾಜ್ಯ ಮಟ್ಟದವರೆಗೆ)

★ **ಚಿಣ್ಣರ ಕರ್ನಾಟಕ ದರ್ಶನ:**

ಪ್ರತಿ ವರ್ಷವೂ ಬ್ಲಾಕ್ ಹಂತದಲ್ಲಿ 50 ಮಕ್ಕಳಿಗೆ ಚಿಣ್ಣರ ಕರ್ನಾಟಕ ದರ್ಶನದ ಅವಕಾಶ ಕಲ್ಪಿಸಲಾಗಿದೆ.7ನೇ ತರಗತಿ ಪ.ಜಾತಿ/ಪ.ವರ್ಗದ ಮಕ್ಕಳಿಗೆ ಹಾಗೂ ಪ್ರತಿಭಾ ಕಾರಂಜಿ, ಕ್ರೀಡೆಗಳಲ್ಲಿ ತಾಲ್ಲೂಕು ಮಟ್ಟದಲ್ಲಿ ಆಯ್ಕೆಯಾದವರಿಗೆ ಅವಕಾಶ ನೀಡಲಾಗುತ್ತಿದೆ.

★ **ವಿಶೇಷ ವಸತಿ ಶಾಲೆಗಳ ವ್ಯವಸ್ಥೆ:**

ಪ್ರತಿಭಾವಂತ ಮಕ್ಕಳಿಗೆ ನವೋದಯ ವಸತಿ ಶಾಲೆ, ಮುರಾರ್ಜಿವಸತಿ ಶಾಲೆ ಹಾಗೂ ಕುವೆಂಪು ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ.

★ **ವಿದ್ಯಾರ್ಥಿ ಸುರಕ್ಷಾ ವಿಮೆ:**

ಅಪಘಾತದಿಂದ ಶಾಲಾ ವಿದ್ಯಾರ್ಥಿಗಳಿಗೆ ಆಗಬಹುದಾದ ಅನಾಹುತಗಳನ್ನು ಗಮನದಲ್ಲಿಟ್ಟುಕೊಂಡು ಅದರ ಪರಿಹಾರಕ್ಕಾಗಿ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಯಿಂದ ವಿದ್ಯಾರ್ಥಿ ಸುರಕ್ಷಾ ವಿಮೆ ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆಯನ್ನು 2001–02 ರಿಂದ ಜಾರಿಗೆ ತರಲಾಗಿದೆ.

**ಸಾರ್ವತ್ರಿಕ ಕಲಿಕೆ :**

ದಾಖಲಾದ ಎಲ್ಲಾ ಮಕ್ಕಳು ಮುಖ್ಯವಾಹಿನಿಯಲ್ಲಿ ಉಳಿದು ಅಪೇಕ್ಷಿತ ಮಟ್ಟದ ಕಲಿಕೆಯಾಗುವಂತೆ ಮಾಡುವುದು.ಈ ಕಲಿಕೆಯಾಗುವಂತೆ ಮಾಡಲು ಹಲವಾರು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.ಇತ್ತೀಚೆಗೆ ಕಲಕೆಯನ್ನು ಆಂದೋಲನದ ರೂಪದಲ್ಲಿ ಕೈಗೆತ್ತಿಕೊಳ್ಳಲಾಗಿದೆ.

**ಅವುಗಳೆಂದರೆ :**

★ **ಶಿಕ್ಷಕರ ನೇಮಕ:** ಪಾರದರ್ಶಕ ನೀತಿ ಅನುಸರಿಸಿ ಉತ್ತಮ ಸಾಮರ್ಥ್ಯ ಹೊಂದಿದ ಶಿಕ್ಷಕರ ನೇಮಕ ಮಾಡಲಾಗುತ್ತದೆ.

★ **ಶಿಕ್ಷಕರ ಸಬಲೀಕರಣ:** ಶಿಕ್ಷಕರಿಗೆ ಸೇವಾನಿರತ ತರಬೇತಿಗಳನ್ನು ಹಮ್ಮಿಕೊಂಡು ಅಪೇಕ್ಷಿತ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಪ್ರೋತ್ಸಾಹಿಸಲಾಗುತ್ತದೆ.

★ **ಸಾಮರ್ಥ್ಯಾಧಾರಿತ ಪಠ್ಯಪುಸ್ತಕ:** ಮಕ್ಕಳು ಗಳಿಸಿಕೊಳ್ಳಬೇಕಾದ ಸಾಮರ್ಥ್ಯಗಳನ್ನು ಗಮನದಲ್ಲಿರಿಸಿಕೊಂಡು ಪಠ್ಯಪುಸ್ತಕ ಸಿದ್ಧಪಡಿಸಲಾಗಿದೆ.

★ **ಬೋಧನಾ ವಿಧಾನಗಳು:** ನವೀನ ಬೋಧನಾ ವಿಧಾನಗಳಾದ ನಲಿ–ಕಲಿ, ಚೈತನ್ಯ ಮಾದರಿಯ ಬೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ.

★ **ಶಿಕ್ಷಣದಲ್ಲಿ ತಂತ್ರಜ್ಞಾನ:** ತರಗತಿಯಲ್ಲಿ ಕಲಿಕೆಯನ್ನು ಸರಳ, ಸಂತಸ, ಸುಲಭವಾಗಿಸಲು ಬೋಧನೆಯಲ್ಲಿ ತಂತ್ರಜ್ಞಾನ ಅಳವಡಿಸಲಾಗಿದೆ.

★ **ಪರಿಹಾರ ಬೋಧನೆ:** ಕಲಿಕೆಯಲ್ಲಿ ಹಿಂದುಳಿದ ಮಗುವನ್ನು ಗುರುತಿಸಿ ಪರಿಹಾರ ಬೋಧನೆ ನೀಡಿ ಪ್ರಭುತ್ವ ಮಟ್ಟದ ಕಲಿಕೆಯನ್ನುಂಟು ಮಾಡಲಾಗುತ್ತಿದೆ.

★ **ಸಹಪಠ್ಯ ಚಟುವಟಿಕೆ:** ಮಗುವಿನ ಸರ್ವತೋಮುಖ ಕಲಿಕೆಯ ಉದ್ದೇಶವಿಟ್ಟುಕೊಂಡು ಸಹ ಪಠ್ಯ ಚಟುವಟಿಕೆ ಆದ್ಯತೆ ನೀಡಲಾಗುತ್ತಿದೆ.

★ **ಶಾಲಾ ಹಂತದ ತರಬೇತಿ:** ಮಕ್ಕಳ ಕಲಿಕಾ ಸಮಸ್ಯೆಗಳು ಮತ್ತು ಕ್ಲಿಷ್ಟ ಪರಿಕಲ್ಪನೆಗಳನ್ನು ಶಾಲಾ ಹಂತದಲ್ಲಿಯೇ ಮುಖಾಮುಖಿ ಚರ್ಚಿಸಿ ಪರಿಹಾರ ನೀಡಲಾಗುತ್ತಿದೆ.

★ **ಶಿಕ್ಷಕರಿಗೆ ಅನುದಾನ:** ಶಿಕ್ಷಕರು ಸ್ವತಃ ಕಡಿಮೆ ವೆಚ್ಚದ ಕಲಿಕಾ ಸಾಮಗ್ರಿಗಳನ್ನು ತಯಾರಿಸಿಕೊಂಡು ಪರಿಣಾಮಕಾರಿಯಾಗಿ ಕಲಿಸಲು ಪ್ರೋತ್ಸಾಹಿಸುವ ದೃಷ್ಠಿಯಿಂದ ಪ್ರತಿ ಶಿಕ್ಷಕರಿಗೆ ವಾರ್ಷಿಕ 500 ರೂಪಾಯಿಗಳ ಅನುದಾನ ನೀಡಲಾಗುತ್ತಿದೆ.

★ **ಸಮುದಾಯದತ್ತ ಶಾಲೆ:** ಸಮುದಾಯದತ್ತ ಶಾಲೆ ಕಾರ್ಯಕ್ರಮದಲ್ಲಿ ಪೋಷಕರು ಶಿಕ್ಷಕರನ್ನು ಭೇಟಿಮಾಡಿ ಮಕ್ಕಳ ಪ್ರಗತಿಯ ಬಗ್ಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳಲಾಗುತ್ತಿದೆ.

★ **ಕೆ.ಎಸ್.ಕ್ಯೂ.ಎ.ಓ:** ಶಾಲೆಗಳಲ್ಲಿ ಗುಣಾತ್ಮಕ ಕಲಿಕೆಯನ್ನುಂಟು ಮಾಡಲು ವಿವಿಧ ಕ್ರಿಯಾ ಯೋಜನೆಗಳ ಮೂಲಕ ಕಾರ್ಯತಂತ್ರಗಳನ್ನು ರೂಪಿಸಲಾಗಿದೆ.

★ **ನಲಿಕಲಿ:** ಕಿರಿಯ ಪ್ರಾಥಮಿಕ ತರಗತಿಗಳಲ್ಲಿ ಅದರಲ್ಲಿಯೂ 1 ಮತ್ತು 2ನೇ ತರಗತಿಯಲ್ಲಿ ಸ್ವವೇಗದ, ಸ್ವಕಲಿಕೆಗೆ ಅನುಕೂಲವಾಗುವ ನಲಿ–ಕಲಿ ವಿಧಾನವನ್ನು ಅಳವಡಿಸಲಾಗಿದೆ.

# 3. ಮಗು ಮತ್ತು ಹಕ್ಕುಗಳು

**ಶಿಕ್ಷಣ ಹಾಗೂ ಸಾಂಸ್ಕೃತಿಕ ಹಕ್ಕುಗಳು**

- ಉಚಿತ ಪ್ರಾಥಮಿಕ ಶಿಕ್ಷಣ ಪಡೆಯಲು
- ಪ್ರೌಢಶಿಕ್ಷಣ ಹಾಗೂ ವೃತ್ತಿಶಿಕ್ಷಣ ಪಡೆಯಲು ಅವಕಾಶ.
- ಮಗುವಿನ ವ್ಯಕ್ತಿತ್ವ, ಪ್ರತಿಭೆ, ಮಾನಸಿಕ ಹಾಗೂ ಭೌತಿಕ ಸಾಮರ್ಥ್ಯಗಳನ್ನು ಪೂರ್ಣವಾಗಿ ಬೆಳೆಸುವಂತಹ ಶಿಕ್ಷಣ ಪಡೆಯುವ ಹಕ್ಕು
- ಮಗು ಪರಿಪೂರ್ಣವಾದ ವಯಸ್ಕ ಜೀವನವನ್ನು ಮುಕ್ತ ಸಮಾಜದಲ್ಲಿ ನಿರ್ವಹಿಸುವಂತೆ ಸಾಮರ್ಥ್ಯವನ್ನು ಕೊಡುವ ಶಿಕ್ಷಣ
- ಮಗು ಕುಟುಂಬದ ಬಗ್ಗೆ ಗೌರವವನ್ನು, ಸಂಸ್ಕೃತಿಯನ್ನು ಗುರುತಿಸಬಲ್ಲ ಭಾಷೆಯನ್ನು ಕಲಿಸುವ ಮತ್ತು ಪರಿಸರವನ್ನು ಸಂರಕ್ಷಿಸಲು ಬೇಕಾದಂಥ ಗುಣಗಳನ್ನು ಅಭಿವೃದ್ಧಿಗೊಳಿಸುವ ಶಿಕ್ಷಣ ಪಡೆಯುವ ಹಕ್ಕು.
- ಪರಸ್ಪರ ಹೊಂದಾಣಿಕೆ, ಶಾಂತಿ, ಸಹಿಷ್ಣುತೆ ಹಾಗೂ ಸಮಾನತೆಯ ಭಾವನೆಯನ್ನು ಬೆಳೆಸುವ ಶಿಕ್ಷಣ ಪಡೆಯುವ ಹಕ್ಕು.
- ಸಾಂಸ್ಕೃತಿಕ, ಕಲಾತ್ಮಕ, ಕ್ರೀಡೆ ಹಾಗೂ ತನ್ನ ವಿರಾಮವನ್ನು ಫಲಪ್ರದವಾಗಿ ಕಳೆಯುವ ಹಕ್ಕು.
- ತನ್ನ ಸಾಂಸ್ಕೃತಿಕ, ಧಾರ್ಮಿಕ ಕ್ರಿಯೆಗಳಲ್ಲಿ ಭಾಗವಹಿಸುವ ಹಾಗೂ ತನ್ನ ಭಾಷೆಯನ್ನು ಬಳಸುವ ಹಕ್ಕು ಇದೆ.

**ಪೋಷಕರ ಜವಾಬ್ದಾರಿ**

- ತಮ್ಮ ಮಕ್ಕಳನ್ನು ಸಾಕಿ ಸಲಹುವುದು, ಬೆಳೆಸುವುದು ತಂದೆ ತಾಯಿಗಳ ಜವಾಬ್ದಾರಿ. ಇದು ಕಾನೂನು ಬದ್ಧವಾಗಿ ಪೋಷಕರಿಗೂ ಅನ್ವಯಿಸುತ್ತದೆ.
- ಒಡಂಬಡಿಕೆಯಲ್ಲಿ ಹೇಳಿರುವ ಎಲ್ಲಾ ಹಕ್ಕುಗಳು ಮಕ್ಕಳಿಗೆ ದೊರಕಬೇಕೆಂದಿದ್ದಲ್ಲಿ ಅಗತ್ಯವಾದೆಡೆ ಪೋಷಕರಿಗೆ, ತಂದೆ ತಾಯಿಯರಿಗೆ ಕೆಲವು ಸವಲತ್ತುಗಳನ್ನು ಸರ್ಕಾರ ತನ್ನ ವ್ಯವಸ್ಥೆ ಅಥವಾ ಸೇವಾ ಸಂಸ್ಥೆಗಳ ಮೂಲಕ ಒದಗಿಸಬೇಕು
- ದುಡಿಯುವ ಪೋಷಕರಿಗೆ ಅವರ ಮಕ್ಕಳ ಪಾಲನೆಗಾಗಿ ವ್ಯವಸ್ಥೆ ಮಾಡಿಕೊಳ್ಳುವ ಹಕ್ಕಿದೆ. ಇದಕ್ಕಾಗಿ ಎಲ್ಲೆಲ್ಲಿ ದುಡಿಯುವ ಪೋಷಕರಿದ್ದಾರೋ ಅಲ್ಲೆಲ್ಲಾ ಶಿಶುಪಾಲನಾ ಕೇಂದ್ರಗಳನ್ನು ಮತ್ತು ಆ ರೀತಿಯ ಸೇವಾ ಸೌಲಭ್ಯಗಳನ್ನು ಸರ್ಕಾರ ವ್ಯವಸ್ಥೆ ಮಾಡಬೇಕು.

**ವಿಶೇಷ ಸಂರಕ್ಷಣೆಯ ಹಕ್ಕು**

- ಮಗುವು ತನ್ನ ಸಾಮರ್ಥ್ಯಕ್ಕೆ ಮೀರಿದ ಕೆಲಸ ಕಾರ್ಯಗಳಲ್ಲಿ ತೊಡಗಿದಾಗ, ಮಾದಕ ವಸ್ತುಗಳ ಚಟಕ್ಕೆ ಒಳಪಟ್ಟಾಗ, ಲೈಂಗಿಕ ಶೋಷಣೆ ಅಥವಾ ಲೈಂಗಿಕ ದುರುಪಯೋಗವಾದಾಗ, ಅಪಹರಣ ಮುಂತಾದ ಶೋಷಣೆಗಳಿಗೆ ಒಳಪಟ್ಟಾಗ ಸಂರಕ್ಷಣೆ ಹೊಂದುವ ಹಕ್ಕು.
- ಯಾವುದೇ ರೀತಿಯ ಪಕ್ಷಪಾತಕ್ಕೆ ಒಳಪಟ್ಟಾಗ ಸಂರಕ್ಷಣೆ ಹೊಂದುವ ಹಕ್ಕು.

# 4. ಮಕ್ಕಳ ಶಿಕ್ಷಣ ಮತ್ತು ಸಮುದಾಯ

## ನಾಗರೀಕ ಸೌಲಭ್ಯ ಸಮಿತಿ

**ಶಿಕ್ಷಣಕ್ಕಾಗಿ ವಿವಿದ ಸಮುಚಿತ ಸ್ಥಳೀಯ ಸರ್ಕಾರಗಳು ಮತ್ತು ಸಮುದಾಯಗಳು ಕಾರ್ಯ ನಿರ್ವಹಿಸಬೇಕಾಗಿದೆ. ಇಲ್ಲಿ ಸ್ಥಳೀಯ ಸರ್ಕಾರಗಳ ಕೆಲವು ಸಮಿತಿಗಳನ್ನು ಚರ್ಚಿಸಿದೆ.**

### 4.1 ಸ್ಥಳೀಯ ಪ್ರಾಧಿಕಾರ :

ಸ್ಥಳೀಯ ಪ್ರಾಧಿಕಾರ ಎಂದರೆ, ಪುರಸಭಾ ನಿಗಮ, ಮುನಿಸಿಪಲ್ ಕೌನ್ಸಿಲ್, ಜಿಲ್ಲಾ ಪರಿಷತ್ತು, ನಗರ ಪಂಚಾಯತಿ ಅಥವಾ ಒಂದು ಗ್ರಾಮ ಪಂಚಾಯತಿ. ಇದು ಆ ವ್ಯಾಪ್ತಿಯಲ್ಲಿನ ಶಾಲೆಯ ಮೇಲೆ ಆಡಳಿತಾತ್ಮಕ ನಿಯಂತ್ರಣ ಹೊಂದಿರುವ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಕರ್ತವ್ಯ ನಿರ್ವಹಿಸುವ ಪ್ರಾಧಿಕಾರವಾಗಿರುತ್ತದೆ. ಆರ್.ಟಿ.ಇ ಸೆಕ್ಷನ್ 9 ರಲ್ಲಿ ಸ್ಥಳೀಯ ಪ್ರಾಧಿಕಾರದ ಪಾತ್ರವನ್ನು ಈ ಕೆಳಕಂಡಂತೆ ನೀಡಿದೆ.

- ಸ್ಥಳೀಯ ಪ್ರಾಧಿಕಾರವು ತನ್ನ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ 14 ವರ್ಷ ವಯಸ್ಸಿನವರೆಗಿನ ಮಕ್ಕಳ ದಾಖಲೆಯನ್ನು ನಿರ್ವಹಿಸುವುದು (ಈ ದಾಖಲೆಯ ನಮೂನೆಯನ್ನು ಅನುಬಂಧದಲ್ಲಿ ನೀಡಿದೆ.)
- ಪ್ರತಿಯೊಂದು ಮಗುವೂ ಪ್ರಾಥಮಿಕ ಶಿಕ್ಷಣಕ್ಕೆ ಪ್ರವೇಶ ಪಡೆದು, ಹಾಜರಾಗಿ ಅದನ್ನು ಪೂರ್ಣಗೊಳಿಸುವಂತೆ ನೋಡಿಕೊಳ್ಳತಕ್ಕದ್ದು.
- ನಿರ್ದಿಷ್ಟಪಡಿಸಿದ ಪೂರಕ ಗುಣಮಟ್ಟಗಳಿಗೆ ಮತ್ತು ಪ್ರಮಾಣಗಳಿಗೆ ಅನುಗುಣವಾಗಿ ಉತ್ತಮ ಗುಣಮಟ್ಟದ ಪ್ರಾಥಮಿಕ ಶಿಕ್ಷಣ ದೊರೆಯುವಂತೆ ನೋಡಿಕೊಳ್ಳುವುದು.
- ಅಲೆಮಾರಿ ಕುಟುಂಬಗಳ ಮಕ್ಕಳಿಗೆ ಪ್ರವೇಶಾವಕಾಶ ದೊರಕುವಂತೆ ನೋಡಿಕೊಳ್ಳುವುದು.
- ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಶಾಲೆಗಳ ಕಾರ್ಯನಿರ್ವಹಣೆಯ ಮೇಲ್ವಿಚಾರಣೆಯನ್ನು ಮಾಡತಕ್ಕದ್ದು. ವಾರ್ಷಿಕ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಿರ್ಣಯಿಸತಕ್ಕದು.

### 4.2 ನಾಗರೀಕ ಸೌಲಭ್ಯ ಸಮಿತಿ

ಗ್ರಾಮ ಪಂಚಾಯಿತಿಯಲ್ಲಿರುವ ನಾಗರೀಕ ಸೌಲಭ್ಯ ಸಮಿತಿಯು ಶಿಕ್ಷಣ, ಸಾರ್ವಜನಿಕ ಆರೋಗ್ಯ, ಲೋಕೋಪಯೋಗಿ ಕಾಮಗಾರಿಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಮತ್ತುಗ್ರಾಮ ಪಂಚಾಯಿತಿಯ ಇತರೆ ಕಾರ್ಯಗಳನ್ನು ನಿರ್ವಹಿಸಲು ಇರುವ ಸಮಿತಿಯಾಗಿರುತ್ತದೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ತಮ್ಮ ವ್ಯಾಪ್ತಿಯ ಎಲ್ಲಾ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣ ನೀಡುವುದು ಪಂಚಾಯಿತಿ ಅರ್ಥಾತ್ ನಾಗರೀಕ ಸೌಲಭ್ಯ ಸಮಿತಿಯ (CAC) ಜವಾಬ್ದಾರಿಯಾಗಿರುತ್ತದೆ.

SDMC ಅಯ ಉಪ ವಿಧಿಗಳಿಗೆ ಸಂಬಂಧಿಸಿದಂತೆ ಪ್ರತಿಯೊಂದು ಪಂಚಾಯಿತಿ ವ್ಯಾಪ್ತಿಯಲ್ಲಿನ ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣದ ಜವಾಬ್ದಾರಿ ನಾಗರೀಕ ಸೌಕರ್ಯ ಸಮಿತಿಯ ಅಡಿಯಲ್ಲಿರುವುದರಿಂದ SDMC ಗಳನ್ನು ರಚಿಸಿ ಆ ಮೂಲಕ SDMCಗಳಿಗೆ ಶಾಸನ ಬದ್ಧ ಸ್ಥಾನಮಾನಗಳನ್ನು ಕಲ್ಪಿಸಲಾಗಿದೆ.

SDMCಗಳು ಗ್ರಾಮ ಪಂಚಾಯಿತಿಯ ನಾಗರೀಕ ಸೌಲಭ್ಯ ಸಮಿತಿಯ ಭಾಗವಾಗಿ ಕೆಲಸ ನಿರ್ವಹಿಸುವುದರಿಂದ ಇವುಗಳ ಮೇಲ್ವಿಚಾರಣೆ, ಗುಣಾತ್ಮಕ ಶಿಕ್ಷಣಕ್ಕೆ ಬೆಂಬಲ ಹಾಗೂ ಸಹಕಾರ ಮತ್ತು ಉತ್ತೇಜನ ನೀಡಬೇಕಾಗುತ್ತದೆ. ಪ್ರತಿ ಶಾಲೆಯSDMC-ರಚನೆಯಾದ ನಂತರ ಈ ಸಮಿತಿಯಿಂದ ಅನುಮೋದನೆಯೊಂದಿಗೆ ಜಾರಿಗೊಳಿಸಬೇಕಾಗಿದೆ. ಈ ಸಮಿತಿಯು 3 ತಿಂಗಳಿಗೊಮ್ಮೆ ಸಮನ್ವಯ ಸಮಿತಿಯಲ್ಲಿ ಪಾಲ್ಗೊಂಡು ಶಾಲೆಯ ಅಗತ್ಯತೆ ಗುಣಾತ್ಮಕ ಕಲಿಕೆಯನ್ನು ಖಾತರಿಪಡಿಸಿಕೊಳ್ಳುವುದು.

### 4.3 ಎಸ್.ಡಿ.ಎಂ.ಸಿ. ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯ ಕಾರ್ಯದರ್ಶಿಯವರ ಅಧಿಕಾರ ಹಾಗೂ ಕರ್ತವ್ಯಗಳು

**ಅಧ್ಯಕ್ಷರ ಪ್ರಕಾರ್ಯಗಳು :**

A. ಅಧ್ಯಕ್ಷರು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

1. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರಾಗಿ ಸಭೆಗಳ ಅಧ್ಯಕ್ಷತೆ ವಹಿಸುವುದು.
2. ಮುಖ್ಯ ಶಿಕ್ಷಕರಿಗೆ ಸಾಂದರ್ಭಿಕ ರಜೆ ನೀಡುವುದು.
3. ದೂರುಗಳ ಪೆಟ್ಟಿಗೆಯನ್ನು ಆ ಸಮಯದಲ್ಲಿ ಅಲ್ಲಿ ಲಭ್ಯವಿರುವ ಕನಿಷ್ಠ ಒಬ್ಬ ಶಿಕ್ಷಕ ಮತ್ತು ವಿದ್ಯಾರ್ಥಿಯ ಉಪಸ್ಥಿತಿಯಲ್ಲಿ ಕನಿಷ್ಠ ವಾರಕ್ಕೊಮ್ಮೆ.

B. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಮಾರ್ಗದರ್ಶನ ನೀಡುವಂಥ ಇತರ ಕಾರ್ಯಗಳನ್ನು ನಿರ್ವಹಿಸತಕ್ಕದ್ದು.

**ಉಪಾಧ್ಯಕ್ಷರ ಪ್ರಕಾರ್ಯಗಳು :**

A. ಅಧ್ಯಕ್ಷರ ಗೈರು ಹಾಜರಿಯಲ್ಲಿ, ಉಪಾಧ್ಯಕ್ಷರು ಎಸ್.ಡಿ.ಎಂ.ಸಿ ಉಪವಿಧಿಗಳ 7ನೇ ಖಂಡದಲ್ಲಿ ನಿರ್ದಿಷ್ಟಪಡಿಸಲಾದಂತೆ ಅಧ್ಯಕ್ಷರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

B. ಉಪಾಧ್ಯಕ್ಷರು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಮಾರ್ಗದರ್ಶನ ನೀಡುವಂತ ಇತರ ಎಲ್ಲಾ ಕಾರ್ಯಗಳನ್ನು ಸಹ ನಿರ್ವಹಿಸತಕ್ಕದ್ದು.

**ಸದಸ್ಯ ಕಾರ್ಯದರ್ಶಿಯ ಪ್ರಕಾರ್ಯಗಳು**

- ✧ ಸದಸ್ಯ ಕಾರ್ಯದರ್ಶಿಯು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.
- ✧ ಪ್ರತಿ ಶೈಕ್ಷಣಿಕ ವರ್ಷದ ಪ್ರಾರಂಭಕ್ಕೆ ಕನಿಷ್ಠ ಒಂದು ತಿಂಗಳ ಮೊದಲು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅನುಮೋದನೆ ಪಡೆದು ವಾರ್ಷಿಕ ಕ್ರಿಯಾಯೋಜನೆಯಲ್ಲಿ ಸಿದ್ಧಪಡಿಸುವುದು ಮತ್ತು ಅದನ್ನು ಸಿದ್ಧಪಡಿಸಿದ ಒಂದು ವಾರದೊಳಗೆ ಸಿ.ಎ.ಸಿಗೆ ಸಲ್ಲಿಸತಕ್ಕದ್ದು.
- ✧ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಭೆಗೆ ಕಾರ್ಯಸೂಚಿ ತಯಾರಿಸುವುದು. ಸಭೆಗಳ ಕಾರ್ಯಸೂಚಿಯು ಶಾಲೆಯ ಮತ್ತು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಮಾಸಿಕ ಲೆಕ್ಕಪತ್ರಗಳು, ಶಾಲಾ ಅಭಿವೃದ್ಧಿ, ಆಡಳಿತ, ಹಾಜರಾತಿ, ದಾಖಲಾತಿ ಮಕ್ಕಳನ್ನು ಶಾಲೆಯಲ್ಲಿ ಉಳಿಸಿಕೊಳ್ಳುವುದು ಮತ್ತು ಅವರ ಶೈಕ್ಷಣಿಕ ಸಾಧನೆಗೆ ಸಂಬಂಧಿಸಿದ ಅಂಶಗಳನ್ನು ಒಳಗೊಂಡಿರತಕ್ಕದ್ದು.
- ✧ ಎಸ್.ಡಿ.ಎಂ.ಸಿ ಅಧಿನಿಯಮದ ಅಧ್ಯಾಯ ೨ತ ರ ಅನುಸಾರ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಭೆ ಕರೆಯುವುದು ಮತ್ತು ಅದಕ್ಕೆ ಅನುಕೂಲ ಕಲ್ಪಿಸಿಕೊಡುವುದು ಮತ್ತು ಎಲ್ಲಾ ಸಭೆಗಳ ನಡಾವಳಿಗಳನ್ನು ತೆಗೆದುಕೊಳ್ಳುವುದು.
- ✧ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಮಾಹಿತಿಗಾಗಿ ಆತನ/ಆಕೆಯ ಅಧಿಕಾರದ ಅಡಿಯಲ್ಲಿ ಬರುವ ಎಲ್ಲ ವಿಷಯಗಳ ಮಾಹಿತಿಯನ್ನು ತಯಾರಿಸುವುದು.
- ✧ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಲೆಕ್ಕ ಪತ್ರಗಳು ಮತ್ತು ದಾಖಲೆಗಳನ್ನು ಇಟ್ಟುಕೊಳ್ಳುವುದು.
- ✧ ಆತನ/ಆಕೆಯ ಪ್ರಭಾರದಲ್ಲಿರುವ ಶಾಲೆಗೆ ಸೇರಿರುವ ಎಲ್ಲ ದಸ್ತಾವೇಜುಗಳು ಮತ್ತು ಸ್ವತ್ತಿನ ಸುರಕ್ಷಿತ ಸುಪರ್ದಿಗೆ ಜವಾಬ್ದಾರರಾಗಿರುವುದು.
- ✧ ಕನಿಷ್ಠಪಕ್ಷ, ಪ್ರತಿ ಮೂರು ತಿಂಗಳುಗಳಿಗೊಮ್ಮೆ ತಂದೆತಾಯಿಯರ ಪರಿಷತ್ತು ಮತ್ತು ನಾಗರೀಕ ಸೌಲಭ್ಯ ಸಮಿತಿಗೆ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಚಟುವಟಿಕೆಗಳ ವರದಿ ಮತ್ತು ಲೆಕ್ಕಪತ್ರಗಳ ವಿವರ ಪಟ್ಟಿಯನ್ನು ತಯಾರಿಸುವುದು ಹಾಗೂ ಹಾಜರುಪಡಿಸುವುದು.

B. ಸದಸ್ಯ ಕಾರ್ಯದರ್ಶಿಗಳು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಮಾರ್ಗದರ್ಶನ ನೀಡುವಂಥ ಇತರ ಎಲ್ಲಾ ಕಾರ್ಯಗಳನ್ನು ಸಹ ನಿರ್ವಹಿಸತಕ್ಕದ್ದು.

**ಸಿ.ಎ.ಸಿ. ಮತ್ತು ಎಸ್.ಡಿ.ಎಮ್.ಸಿ.ಯ ಅಧಿಕಾರಗಳು ಮತ್ತು ಕರ್ತವ್ಯಗಳು**

**(ಎ) ನಾಗರಿಕ ಸೌಲಭ್ಯ ಸಮಿತಿಯ ಕರ್ತವ್ಯಗಳು ಮತ್ತು ಅಧಿಕಾರಗಳು**

- ✧ ನಾಗರೀಕ ಸೌಲಭ್ಯ ಸಮಿತಿಯು ಪಂಚಾಯಿತಿ ಪ್ರದೇಶದ ವ್ಯಾಪ್ತಿಯೊಳಗೆ ಪ್ರತಿಯೊಂದು ಪ್ರಾಥಮಿಕ ಶಾಲೆಗಾಗಿ ಒಂದು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯನ್ನು ರಚಿಸುವುದು.
- ✧ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ರಚನಾ ಕಾರ್ಯವನ್ನು ಆಯಾ ಶಾಲೆಯ ಮುಖ್ಯ ಶಿಕ್ಷಕರಿಗೆ ಪ್ರತ್ಯಾಯೋಜಿಸುವುದು.
- ✧ ನಿಯಮಾನುಸಾರ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ರಚನೆ ಆಗಿದೆಯೇ ಎಂದು ಪರಿಶೀಲನೆ ನಡೆಸುವುದು
- ✧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಅನುಸೂಚಿ ಒಂದರ XIIIನೇ ಖಂಡದಲ್ಲಿ ನಿರ್ದಿಷ್ಟ ಪಡಿಸಲಾದ ಪ್ರಕಾರ್ಯಗಳ ಮುಂದುವರಿಕೆಯಾಗಿ ಈ ಸಂಬಂಧದಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಕೈಗೊಂಡ ಕ್ರಮಗಳನ್ನು ಪರಿಶೀಲನೆ ಮಾಡುವುದು
- ✧ ನಾಗರೀಕ ಸೌಲಭ್ಯ ಸಮಿತಿಯನ್ನು ತನ್ನ ವ್ಯಾಪ್ತಿಯ ಶಾಲೆಯ ಶಿಕ್ಷಣಕ್ಕಾಗಿ ಮತ್ತು ಶಾಲೆಯ ಮೂಲಭೂತ ಸೌಕರ್ಯಗಳಿಗಾಗಿ ತಾನು ಸ್ವೀಕರಿಸಿದ ಎಲ್ಲಾ ನಿಧಿಗಳನ್ನು ಸ್ವೀಕರಿಸಿದ ಒಂದು ವಾರದೊಳಗೆ ಸಂಬಂಧಿಸಿದ ಶಾಲೆಯ ಲೆಕ್ಕಕ್ಕೆ ವರ್ಗಾಯಿಸತಕ್ಕದ್ದು.

- ನಾಗರೀಕ ಸೌಲಭ್ಯ ಸಮಿತಿಯು ಶಾಲೆಗಳ ಅಗತ್ಯಕ್ಕೆ ತಕ್ಕಂತೆ ಪಂಚಾಯತಿ ಪ್ರದೇಶದ ವ್ಯಾಪ್ತಿಯೊಳಗಿನ ಶಾಲೆಗಳ ಲೆಕ್ಕಕ್ಕೆ ಹೆಚ್ಚುವರಿ ನಿಧಿಗಳನ್ನು ವರ್ಗಾಯಿಸಬಹುದು.
- ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಕಾರ್ಯದರ್ಶಿ ತಯಾರಿಸಿದ ಶಾಲಾ ವಾರ್ಷಿಕ ಕ್ರಿಯಾ ಯೋಜನೆಯನ್ನು ಪರಿಶೀಲಿಸುವುದು ಹಾಗೂ ಅಗತ್ಯ ಸಲಹೆ, ಸೂಚನೆಗಳೊಂದಿಗೆ ಒಂದುವಾರದೊಳಗಾಗಿ ಅನುಮೋದನೆ ನೀಡುವುದು.
- 6 ರಿಂದ 14 ವಯೋಮಾನದ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಕರೆತರುವುದರಲ್ಲಿ ಎಸ್.ಡಿ.ಎಂ.ಸಿ.ಗೆ ಸಲಹೆ ಸಹಕಾರ ನೀಡುವುದು.
- ಪ್ರಾಥಮಿಕ ಶಾಲೆಗಳಲ್ಲಿ ಪೂರ್ಣ ಪ್ರಮಾಣದ ದಾಖಲಾತಿ ಹಾಗೂ ಹಾಜರಾತಿಯನ್ನು ಖಚಿತಪಡಿಸಿಕೊಳ್ಳುವುದು.
- ಶಿಕ್ಷಣದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು.
- ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮ, ಸಮವಸ್ತ್ರ, ಪಠ್ಯಪುಸ್ತಕ ಮುಂತಾದ ಎಲ್ಲಾ ಸರ್ಕಾರಿ ಯೋಜನೆಗಳು ಶಾಲೆಯಲ್ಲಿ ಸಕಾಲದಲ್ಲಿ ಅನುಷ್ಠಾನಗೊಳ್ಳುವಂತೆ ನೋಡಿಕೊಳ್ಳುವುದು.
- ಸಮೂಹ ಸಂಪನ್ಮೂಲ ವ್ಯಕ್ತಿ ಮತ್ತು ಶೈಕ್ಷಣಿಕ ಸಮನ್ವಯಕಾರರಿಗೆ ಶಾಲಾ ವ್ಯವಸ್ಥೆಯ ಸುಧಾರಣೆಯ ಬಗ್ಗೆ ರಚನಾತ್ಮಕ ಸಲಹೆಗಳು ಯಾವುದಾದರು ಇದ್ದರೆ ಅವುಗಳನ್ನು ಸೂಚಿಸುವುದು.
- ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಎಲ್ಲಾ ಸ್ವತ್ತುಗಳು, ನಿಧಿಗಳು ಮತ್ತು ಹಣಕಾಸಿನ ಮೇಲ್ವಿಚಾರಣೆಯನ್ನು ನಡೆಸುವುದು.
- ಆಟದ ಮೈದಾನ, ಆವರಣ, ಗೋಡೆ, ಕೊಠಡಿಗಳು, ಶೌಚಾಲಯಗಳು, ಕುಡಿಯುವ ನೀರಿನ ಸೌಲಭ್ಯ, ಅಡುಗೆಕೋಣೆ, ಮುಂತಾದ ಮೂಲ ಸೌಕರ್ಯಗಳು ಹಾಗೂ ಶಾಲೆಗೆ ಅವಶ್ಯವಿರುವ ಇತರ ಸೌಕರ್ಯಗಳನ್ನು ಹೆಚ್ಚಿಸಲು ನೆರವು ನೀಡುವುದು.
- ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸಲ್ಲಿಸಿದ ವರದಿಯನ್ನು ಪರಿಶೀಲಿಸುವುದು.
- ಉಪವಿಧಿಗಳೊಳಗಿನ ಅಧ್ಯಾಯಕ್ಕೆ ಅನುಸಾರವಾಗಿ ವಿದ್ಯಾರ್ಥಿಗಳ, ತಂದೆ ತಾಯಿಯರ, ಶಿಕ್ಷಕರ ಮತ್ತು ಶಾಲೆಯ, ಬೋಧಕೇತರ ಸಿಬ್ಬಂದಿ ವರ್ಗದವರ ಕುಂದು ಕೊರತೆಗಳನ್ನು ಹಾಗೂ ದೂರುಗಳನ್ನು ಬಗೆಹರಿಸುವುದು.
- ನೇರವಾಗಿ ಆಗಲಿ, ಅಥವಾ ದೂರು ಪೆಟ್ಟಿಗೆಯ ಮೂಲಕವಾಗಲಿ ಬಂದ ಲಿಖಿತ ಅಥವಾ ಮೌಖಿಕ ದೂರುಗಳನ್ನು ಪರಿಹರಿಸುವುದು.
- ದೂರುಗಳನ್ನು ಪರಿಹರಿಸಲು ಸಿ.ಎ.ಸಿ.ಯು ದ್ವಿಸದಸ್ಯ ಸಮಿತಿಯನ್ನು ನೇಮಕ ಮಾಡುವುದು.
- ವಿಚಾರಣಾ ಸಮಿತಿಯು ನೀಡಿದ ವರದಿ ಹಾಗೂ ಶಿಫಾರಸ್ಸುಗಳ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳುವುದು
- ಮಕ್ಕಳ ಮೇಲೆ ಯಾವುದೇ ಪ್ರಕಾರದ ದೈಹಿಕ ಅಥವಾ ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದಂತೆ ನಿಯಮಾನುಸಾರ ಕಾರ್ಯವಿಧಾನವನ್ನು ಅನುಸರಿಸುವುದು.
- ಎಸ್.ಡಿ.ಎಂ.ಸಿ. ಅಸ್ತಿತ್ವದಲ್ಲಿರುವ ಸಂದರ್ಭಗಳಲ್ಲಿ ಅಥವಾ ರದ್ದುಪಡಿಸಿದ ಸಂದರ್ಭಗಳಲ್ಲಿ ನಿಯಮಾನುಸಾರ ಹೊಸ ಎಸ್.ಡಿ.ಎಂ.ಸಿ.ಯನ್ನು ರಚಿಸುವವರೆಗೆ ಅದರ ಪ್ರಕಾರ್ಯಗಳನ್ನು ಸಿ.ಎ.ಸಿ. ನಿರ್ವಹಿಸುವುದು.
- ಎಸ್.ಡಿ.ಎಂ.ಸಿ.ಯಲ್ಲಿನ ಹಣಕಾಸು ವ್ಯವಹಾರವು ದುರುಪಯೋಗವಾಗಿರುವುದು ಸಾಬೀತಾಗಿದ್ದಲ್ಲಿ ಸಿ.ಎ.ಸಿ.ಯು ಅಧ್ಯಕ್ಷ ಹಾಗೂ ಕಾರ್ಯದರ್ಶಿಯವರಿಗೆ ಖಾತೆ ವ್ಯವಹಾರ ನಿಲ್ಲಿಸುವಂತೆ ನಿರ್ದೇಶನ ನೀಡಬಹುದಾಗಿದೆ. ಸೂಕ್ತ ಕ್ರಮ ಕೈಗೊಂಡ ನಂತರ ಖಾತೆ ವ್ಯವಹಾರ ಮುಂದುವರೆಸಲು ಸೂಚನೆ ನೀಡಬಹುದುದಾಗಿದೆ.

# 5. ಹಾಜರಾತಿ ಅಧಿಕಾರಿಗಳ ಕರ್ತವ್ಯಗಳು

ಹಾಜರಾತಿ ಅಧಿಕಾರಗಳ ಕರ್ತವ್ಯಗಳ ಬಗ್ಗೆ ಸರ್ಕಾರ ಕಾಲಕಾಲಕ್ಕೆ ಹೊರಡಿಸಿರುವ ತಿದ್ದುಪಡಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುತ್ತಿಲ್ಲ ಎಂದು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಖಾಸಗಿ ಕಕ್ಷಿದಾರರು ವಾದ ಮಂಡಿಸಿರುತ್ತಾರೆ. ಗೌರವಾನ್ವಿತ ನ್ಯಾಯಾಲಯದ ಸದರಿ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಶಿಕ್ಷಣ ಹಕ್ಕು ನಿಯಮಗಳಿಗೆ ಹೊರಡಿಸಿರುವ ತಿದ್ದುಪಡಿ ನಿಯಮಗಳನ್ನು ಅರ್ಥಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ಜಾರಿಗೊಳಿಸಿ ಶಾಲೆಯ ಹೊರಗಿರುವ ಎಲ್ಲಾ ಮಕ್ಕಳನ್ನು ಮುಖ್ಯವಾಹಿನಿಗೆ ತಂದು, ಮುಖ್ಯವಾಹಿನಿಗೆ ಬಂದ ಮಕ್ಕಳು ಯಾವುದೇ ಕಾರಣದಿಂದ ಮತ್ತೊಮ್ಮೆ ಶಾಲೆ ಬಿಡದಂತೆ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಲು ತಿಳಿಸಿದೆ. ಈ ಹಿನ್ನೆಲೆಯಲ್ಲಿ ಹಾಜರಾತಿ ಅಧಿಕಾರಿಗಳು ಈ ಕೆಳಕಾಣಿಸಿದ ಕರ್ತವ್ಯ ನಿರ್ವಹಿಸ ಬೇಕಿದೆ.

1. ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಶಿಕ್ಷಣ ಸಂಯೋಜಕರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಜನವಸತಿ ಪ್ರದೇಶಗಳಲ್ಲಿ ವಾಸಿಸುವ ಮಕ್ಕಳ ಮಾಹಿತಿ ಸಂಗ್ರಹಿಸಿ, ಮಕ್ಕಳ ಗಣತಿ ಮಾಡಿದ ನಂತರ ಶಾಲಾ ವ್ಯಾಪ್ತಿಯಲ್ಲಿನ ಜನವಸತಿ ಪ್ರದೇಶಗಳ 0 ಯಿಂದ 14 ವರ್ಷ ವಯಸ್ಸಿನ ಎಲ್ಲ ಮಕ್ಕಳ ಮಾಹಿತಿಯನ್ನು ಗ್ರಾಮ ಶಿಕ್ಷಣ ವಹಿಗೆ ನಿಗಧಿಪಡಿಸಿರುವ ನಮೂನೆಯಲ್ಲಿ ಶಾಲಾ ಮುಖ್ಯಶಿಕ್ಷಕರು ನಿರ್ವಹಿಸಿರುವುದನ್ನು ಖಾತರಿ ಪಡಿಸಿಕೊಳ್ಳುವುದು.
2. ಸಂಬಂಧಿಸಿದ ಪೋಷಕರಿಗೆ ಅವರ ಮಕ್ಕಳನ್ನು ಶಾಲೆಗೆ ಸೇರಿದಲು ಸೂಚನೆ ನೀಡುವುದು.
3. ಒಂದು ಗ್ರಾಮದಲ್ಲಿ ಒಂದೇ ಶಾಲೆ ಇದ್ದಲ್ಲಿ ಶಾಲಾ ಶಿಕ್ಷಣ ವಹಿಯ ಮಾಹಿತಿಯನ್ನು ಗ್ರಾಮ ಶಿಕ್ಷಣ ವಹಿಯ ಮಾಹಿತಿ ಎಂದು ಪರಿಗಣಿಸುವುದು. ಒಂದು ವೇಳೆ ಯಾವುದಾದರೂ ಗ್ರಾಮದಲ್ಲಿ ಖಾಸಗಿ ಶಾಲೆಗಳು ಸೇರಿದಂತೆ ಒಂದಕ್ಕಿಂತ ಹೆಚ್ಚು ಶಾಲೆಗಳಿದ್ದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸದರಿ ಗ್ರಾಮಕ್ಕೆ ನಿಗಧಿಪಡಿಸಿದ ಕೇಂದ್ರ ಶಾಲೆಯಲ್ಲಿ ಆ ಗ್ರಾಮದ ಎಲ್ಲ ಶಾಲಾ ಶಿಕ್ಷಣ ವಹಿಗಳ ಮಾಹಿತಿಯನ್ನು ಕ್ರೂಢೀಕರಿಸಿ ಗ್ರಾಮ ಶಿಕ್ಷಣ ವಹಿಯನ್ನು (VER) ನಿರ್ವಹಿಸಿರುವುದನ್ನು ಖಾತರಿ ಪಡಿಸಿಕೊಳ್ಳುವುದು.
4. ಶಿಕ್ಷಣ ಹಕ್ಕು ಕಾಯಿದೆ 2009ರ ಸೆಕ್ಷನ್ 9(ಡಿ) ಮತ್ತು ಶಿಕ್ಷಣ ಹಕ್ಕು ನಿಯಮಗಳು 2012ರ ನಿಯಮ 6ರಲ್ಲಿ ಸೂಚಿಸಿರುವಂತೆ ಅವರ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಗ್ರಾಮ ಶಿಕ್ಷಣವಹಿಯಲ್ಲಿ (VER) ನಮೂದಿಸಿರುವ ಶಾಲಾ ವಯಸ್ಸಿನ ಎಲ್ಲಾ ಮಕ್ಕಳ ಮಾಹಿತಿಯನ್ನು ಕ್ರೂಢೀಕರಿಸಿ, ಸ್ಥಳೀಯ ಪ್ರಾಧಿಕಾರವಾದ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲು ಕ್ರಮ ತೆಗೆದುಕೊಳ್ಳುವುದು.
5. ನಗರ ಪ್ರದೇಶದಲ್ಲಿ ವಾರ್ಡ್ ಶಿಕ್ಷಣ ವಹಿ (WER) ನಿರ್ವಹಿಸಿ ವಾರ್ಡ್ ಮಟ್ಟದಲ್ಲಿ ಮಕ್ಕಳ ಮಾಹಿತಿಯನ್ನು ಪ್ರಕಟಿಸಲು ಕ್ರಮ ತೆಗೆದುಕೊಳ್ಳುವುದು.
6. ಗ್ರಾಮ ಶಿಕ್ಷಣ ವಹಿ ಮತ್ತು ವಾರ್ಡ್ ಶಿಕ್ಷಣ ವಹಿಗಳ ಮಾಹಿತಿಯನ್ನು 3 ತಿಂಗಳಿಗೊಮ್ಮೆ ಪರೀಷ್ಕರಿಸುವುದು.
7. ಅವರ ಹಂತದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ವೀಕ್ಷಣ ವಹಿಯನ್ನು ಈ ಸುತ್ತೋಲೆಗೆ ಲಗತ್ತಿಸಿರುವ ನಮೂನೆಯಲ್ಲಿ ನಿರ್ವಹಿಸುವುದು. ಗೈರುಹಾಜರಿ ಅವಧಿಯನ್ನು 7 ದಿನಗಳಿಗೆ ಮಿತಗೊಳಿಸಿ, ಸರ್ಕಾರ ಆದೇಶ ಹೊರಡಿಸಿರುವ ಬಗ್ಗೆ ಎಸ್.ಡಿ.ಎಂ.ಸಿ. ಸದಸ್ಯರು, ಪೋಷಕರು, ಗ್ರಾಮಪಂಚಾಯಿತಿ ಸದಸ್ಯರು ಹಾಗೂ ಸ್ಥಳೀಯ ಶಿಕ್ಷಣಾಸಕ್ತರು ಹಾಗೂ ಸ್ವಯಂ ಸೇವಾ ಸಂಸ್ಥೆಗಳಿಗೆ ತರಬೇತಿ ನೀಡಿ, ಅರಿವು ಮೂಡಿಸುವುದು ಮತ್ತು ಈ ಬಗ್ಗೆ ವ್ಯಾಪಕ ಪ್ರಚಾರ ನೀಡುವುದು.
8. ಅವರ ವ್ಯಾಪ್ತಿಯ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರ ಸಭೆ ಕರೆದು ಯಾವುದೇ ಮಗು ಶಾಲೆಯಿಂದ ಹೊರಗುಳಿಯದಂತೆ ಕ್ರಮತೆಗೆದುಕೊಳ್ಳಲು ಹಾಗೂ ಯಾವುದಾದರೂ ಮಗು ಅನುಮತಿ ಇಲ್ಲದೆ 7 ದಿನಗಳ ನಿರಂತರ ಗೈರು ಹಾಜರಾದಲ್ಲಿ ಸಂಬಂಧಿಸಿದ ಶಿಕ್ಷಣ ಸಂಯೋಜಕರಿಗೆ 3 ದಿನಗಳೊಳಗೆ ನಿಗಧಿತ ನಮೂನೆ IV ರಲ್ಲಿ ವರದಿ ಸಲ್ಲಿಸಲು ತಿಳಿವಳಿಕೆ ನೀಡುವುದು. ನಿಯಮ 6 ಬಿ(1)
9. ಮುಖ್ಯ ಶಿಕ್ಷಕರು/ತರಗತಿ ಶಿಕ್ಷಕರು ಮೀನಾ ತಂಡ ಅಥವಾ ಸ್ಥಳೀಯ ಮುಖಂಡರ ಜೊತೆಗೆ ಸಂಬಂಧಿಸಿದ ಪೋಷಕರನ್ನು ಭೇಟಿ ಮಾಡಿ ಮಗುವಿನ ಗೈರುಹಾಜರಿಗೆ ನಿಜವಾದ ಕಾರಣ ತಿಳಿದುಕೊಂಡು ಪೋಷಕರಿಗೆ ತಿಳಿವಳಿಕೆ ನೀಡಿ, ಮಗು ಶಾಲೆಗೆ ಮರಳಿ ಬರುವಂತೆ ಪೋಷಕರ ಮನ ಒಲಿಸಿರುವುದನ್ನು ಹಾಜರಾತಿ ಅಧಿಕಾರಿ ಖಾತರಿ ಪಡಿಸಿಕೊಳ್ಳುವುದು.
10. ತದನಂತರ ಮಗು ಶಾಲೆಗೆ ಹಾಜರಾಗದಿದ್ದಲ್ಲಿ ಹಾಜರಾತಿ ಅಧಿಕಾರಿಗಳಾದ ಶಿಕ್ಷಣ ಸಂಯೋಜಕರು ಸಂಬಂಧಿಸಿದ ಪೋಷಕರನ್ನು ಭೇಟಿ ಮಾಡಿ ಮಗುವಿನ ಗೈರು ಹಾಜರಿಗೆ ನಿಖರ ಕಾರಣ ಪತ್ತೆ ಹಚ್ಚಿ ಮಗು ಮತ್ತು ಪೋಷಕರಿಗೆ ಸೂಕ್ತ ಮಾರ್ಗದರ್ಶನ ನೀಡಿ ಪೋಷಕರಿಗೆ ಮಗುವಿಗೆ ಹಾಜರಾತಿಗಾಗಿ ನಮೂನೆ Vರಲ್ಲಿ ಹಾಜರಾತಿ ನೋಟಿಸು ನೀಡಿ ನಮೂನೆ VIರಲ್ಲಿ ಸ್ವೀಕೃತಿ ಪಡೆಯುವುದು. ನಿಯಮ 6 ಬಿ(2).
11. ಈ ಪ್ರಕ್ರಿಯೆ ಮುಗಿದ ನಂತರ ಮಗು ಶಾಲೆಗೆ ಹಾಜರಾಗದಿದ್ದಲ್ಲಿ ಹಾಜರಾತಿ ಅಧಿಕಾರಿ ಎಸ್.ಡಿ.ಎಂ.ಸಿ. ಸದಸ್ಯರು ಅಥವಾ ಗ್ರಾಮ ಪಂಚಾಯಿತಿ ಸದಸ್ಯರು ಅಥವಾ ನಗರ ಸ್ಥಳೀಯ ಪ್ರಾಧಿಕಾರದ ಸದಸ್ಯರು ಅಥವಾ ಸ್ಥಳಿಯ

ಸ್ವಯಂ ಸೇವಾ ಸಂಸ್ಥೆಗಳು ಅಥವಾ ಸಾಮಾಜಿಕ ಕಾರ್ಯಕರ್ತರ ಸಹಕಾರದಿಂದ ಸಂಬಂಧಿಸಿದ ಪೋಷಕರು ಹಾಗೂ ಮಗುವಿಗೆ ಕೌನ್ಸಿಲಿಂಗ್ ಮಾಡಿ ಶಿಕ್ಷಣದ ಮಹತ್ವ ವಿವರಿಸಿ ಮಗು ಶಾಲೆಯಿಂದ ಯಾವುದೇ ಕಾರಣಕ್ಕೂ ಹೊರಗುಳಿಯದಂತೆ ಮನ ಒಲಿಸುವುದು.

12. ಅಗತ್ಯವೆನಿಸಿದಲ್ಲಿ ಕ್ಷೇತ್ರ ಸಂಪನ್ಮೂಲ ಕೇಂದ್ರ ಮತ್ತು ಡಯಟ್ ಹಾಗೂ ಸ್ಥಳೀಯ ಪರಿಣಿತ ಸ್ವಯಂ ಸೇವಾ ಸಂಸ್ಥೆಗಳ ಸಹಕಾರದಿಂದ ಮಗುವಿಗೆ ಮತ್ತು ಪೋಷಕರಿಗೆ ಶಿಕ್ಷಣದ ಪ್ರಾಮುಖ್ಯತೆ ಬಗ್ಗೆ ಕೌನ್ಸಿಲಿಂಗ್ ವ್ಯವಸ್ಥೆ ಮಾಡುವುದು. ನಿಯಮ 6 ಡಿ(1)

13. ಈ ಎಲ್ಲಾ ಪ್ರಕ್ರಿಯೆ ಮುಗಿದ ಮೇಲೂ ಸಹ ಮಗು ಶಾಲೆಗೆ ಬಾರದಿದ್ದಲ್ಲಿ, ಮಗುವಿನೊಂದಿಗೆ ಪೋಷಕರು ಸಂಬಂಧಿಸಿದ ಜಿಲ್ಲೆಯ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ನಿಗಧಿತ ದಿನಾಂಕದಂದು ಹಾಜರಾಗಲು ಹಾಜರಾತಿ ಆದೇಶ ಹೊರಡಿಸುವುದು. ನಿಯಮ 6ಡಿ(2)

14. ಹಾಜರಾತಿ ಆದೇಶ ಹೊರಡಿಸಿದ ನಂತರ ಸದರಿ ಪೋಷಕರು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರಾದ ಬಗ್ಗೆ ಅನುಪಾಲನಾ ಕ್ರಮ ತೆಗೆದುಕೊಳ್ಳುವುದು.

15. ಒಂದು ವೇಳೆ ಹಾಜರಾಗದಿದ್ದಲ್ಲಿ, ಬಾಲ ನ್ಯಾಯ ಕಾಯಿದೆ ಪ್ರಕಾರ ಪೋಲೀಸರ ಸಹಕಾರ ಪಡೆದು ಮಗುವಿನೊಂದಿಗೆ ಸಂಬಂಧಿಸಿದ ಪೋಷಕರು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರಾಗುವಂತೆ ಕ್ರಮ ತೆಗೆದುಕೊಳ್ಳುವುದು.

16. ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ನಿಗಧಿತ ದಿನಾಂಕದಂದು ಹಾಜರಾತಿ ಅಧಿಕಾರಿ ಹಾಜರಾಗಿ ಪ್ರಕರಣದ ಪೂರ್ಣ ವಿವರ ನೀಡುವುದು.

17. ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ನೀಡಿದ ಆದೇಶದಂತೆ ಸದರಿ ಮಗುವನ್ನು ವಶಕ್ಕೆ ಪಡೆದು ಯಾವುದಾದರು ಸರ್ಕಾರಿ/ಅನುದಾನಿತ ವಿದ್ಯಾರ್ಥಿ ನಿಲಯ ಅಥವಾ ವಸತಿ ಶಾಲೆಯಲ್ಲಿ ಮಗುವನ್ನು ದಾಖಲು ಮಾಡಿ ಮಗುವಿನ ನಿಯಮಿತ ಹಾಜರಾತಿಯನ್ನು ಖಾತರಿಪಡಿಸಿಕೊಳ್ಳುವುದು.

ಒಟ್ಟಾರೆ ಹಾಜರಾತಿ ಅಧಿಕಾರಿಗಳಾದ ಶಿಕ್ಷಣ ಸಂಯೋಜಕರು ಅವರ ವ್ಯಾಪ್ತಿಯ ಎಲ್ಲಾ ಜನವಸತಿ ಪ್ರದೇಶ/ಗ್ರಾಮಗಳಲ್ಲಿ ಯಾವುದೇ ಮಗು ಶಾಲೆಯಿಂದ ಹೊರಗುಳಿಯದಂತೆ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳುವುದು. ಅಲ್ಲದೆ ಈಗಾಗಲೇ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಬರುವಂತೆ ಮಾಡಿರುವ ಕ್ರಮಗಳ ವರದಿಯನ್ನು ಪ್ರತಿ ತಿಂಗಳ 1 ಮತ್ತು 15 ರಂದು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಈ ಸುತ್ತೋಲೆಗೆ ಲಗತ್ತಿಸಿರುವ ನಮೂನೆಯಲ್ಲಿ ಮಾಹಿತಿ ಸಲ್ಲಿಸುವುದು.

# 6. ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಅಧಿನಿಯಮ, 2009

"ಸೀಮೆ ಎಣ್ಣೆ ದೀಪದ ಮಂದ ಬೆಳಕಿನಲ್ಲಿ ಓದಿದವನು ನಾನು ಇಂದು ನಾನು ಏನಾಗಿದ್ದೇನೋ ಅದಕ್ಕೆ ಕಾರಣ ನಾ ಪಡೆದ ಶಿಕ್ಷಣ. ಭಾರತದ ಪ್ರತಿ ಬಾಲಕ ಬಾಲಕಿಯರು ಇಂತಹ ಶಿಕ್ಷಣದ ಬೆಳಕನ್ನು ಪಡೆಯುವರೆಂಬುದೇ... ನನ್ನ ಅತಿ ದೊಡ್ಡ ಬಯಕೆ ".

ಡಾ. ಮನಮೋಹನ್ ಸಿಂಗ್

ಭಾರತದ ಪ್ರಧಾನಿ

(ಆರ್.ಟಿ.ಇ 09 ಜಾರಿಯ ಕುರಿತು ಮಾನ್ಯ ಪ್ರಧಾನ ಮಂತ್ರಿಗಳು ಹೇಳಿದ ಮಾತು)

## ಮಕ್ಕಳ ಕಡ್ಡಾಯ ಶಿಕ್ಷಣ ಹಕ್ಕು... ಒಂದು ಐತಿಹಾಸಿಕ ಹಿನ್ನೆಲೆ

ಸ್ವಾತಂತ್ರ್ಯ ಪೂರ್ವದಿಂದಲೂ ಭಾರತದಲ್ಲಿ ಶಿಕ್ಷಣಕ್ಕಾಗಿ ನಡೆದ ಹೋರಾಟಗಳು, ಔಪಚಾರಿಕ ಶಿಕ್ಷಣ ಮತ್ತು ಅದು ನಡೆದು ಬಂದ ದಾರಿ ಕುರಿತು ನಮಗೆ ಈಗಾಗಲೇ ತಿಳಿದಿದೆ. ಪ್ರಸ್ತುತ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣದ ಹಕ್ಕೊತ್ತಾಯದ ಪ್ರಯತ್ನಗಳನ್ನು ಅವಲೋಕಿಸೋಣ.

1881ರಲ್ಲಿ ಬ್ರಿಟಿಷ್ ಸರ್ಕಾರವು ಇಂಗ್ಲೆಂಡಿನಲ್ಲಿ ತನ್ನ ನಾಗರೀಕರಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಜಾರಿ ಮಾಡಿತು. ಈ ಕುರಿತು ದಾದಾಬಾಯಿ ನವರೋಜಿಯವರು 1882ರ ಕಾಮನ್ ವೆಲ್ತ್ ಶೃಂಗ ಸಭೆಯಲ್ಲಿ ಬ್ರಿಟಿಷರು ತಮ್ಮ ಜನರಿಗೆ ಜಾರಿಗೊಳಿಸಿದ ಉಚಿತ ಹಾಗು ಕಡ್ಡಾಯ ಶಿಕ್ಷಣದ ಸೌಲಭ್ಯವನ್ನು ಭಾರತೀಯರಿಗೆ ನೀಡದಿದ್ದುದು ನ್ಯಾಯಸಮ್ಮತವಲ್ಲವೆಂದು ವಾದಿಸಿದರು. ಅಲ್ಲಿಂದಲೇ ಭಾರತದಲ್ಲಿ ಉಚಿತ ಹಾಗೂ ಕಡ್ಡಾಯ ಶಿಕ್ಷಣಕ್ಕಾಗಿ ಒತ್ತಾಯ ಪ್ರಾರಂಭವಾಯಿತು.

1908ರಲ್ಲಿ ಬರೋಡ ಸಂಸ್ಥಾನ ಹಾಗೂ 1914ರಲ್ಲಿ ಮೈಸೂರು ಸಂಸ್ಥಾನವು ತಮ್ಮ ರಾಜ್ಯಗಳಲ್ಲಿ ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಮಸೂದೆಯನ್ನು ಅಂಗೀಕರಿಸಿದವು.

1910ರಲ್ಲಿ ಗೋಪಾಲಕೃಷ್ಣ ಗೋಖಲೆಯವರು ಇಂತದ್ದೇ ಮಸೂದೆಯನ್ನು ಬ್ರಿಟೀಷ್ ಸಂಸತ್ತಿನಲ್ಲಿ ಮಂಡಿಸಿದರು. ಈ ಮಸೂದೆ ಅಂಗೀಕಾರವಾಗುವಲ್ಲಿ ವಿಫಲವಾದರೂ ಹೆಚ್ಚಿನ ಜನರ ಒತ್ತಾಯದಿಂದ 1918ರಲ್ಲಿ ಅಂಗೀಕರಿಸಲ್ಪಟ್ಟಿತು. ಅಲ್ಲಿಂದೀಚೆಗೆ ಭಾರತದಲ್ಲಿ ಪ್ರಾಥಮಿಕ ಶಿಕ್ಷಣದ ಶೈಕ್ಷಣಿಕ ಅವಕಾಶಗಳನ್ನು ವಿಸ್ತರಿಸುತ್ತಾ ಬರಲಾಗಿದೆ.

1950ರಲ್ಲಿ ಭಾರತ ಸಂವಿಧಾನವನ್ನು ಅಂಗೀಕರಿಸಿದಾಗ ನಮ್ಮ ರಾಷ್ಟ್ರದ ಸಾಕ್ಷರತಾ ಪ್ರಮಾಣ ಶೇ. 16ರಷ್ಟು ಇದ್ದು ಪ್ರಾಥಮಿಕ ಶಿಕ್ಷಣದ ದಾಖಲಾತಿ ಪ್ರಮಾಣ ಶೇ. 40 ಆಗಿತ್ತು. ಭಾರತದ ಸಂವಿಧಾನದಲ್ಲಿ ನಮಗೆಲ್ಲಾ ತಿಳಿದಿರುವಂತೆ 45ನೇ ವಿಧಿಯಲ್ಲಿ ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣ ನೀಡುವ ಪ್ರಸ್ತಾಪವನ್ನು ಮಾಡಲಾಯಿತು.

1966ರ ಕೊಠಾರಿ ಆಯೋಗ, 1976ರ ಮಹಿಳಾ ಆಯೋಗ, 1986ರ ರಾಷ್ಟ್ರೀಯ ಶಿಕ್ಷಣ ನೀತಿಗಳು ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಮಹತ್ತರ ಕೊಡುಗೆಗಳನ್ನು ನೀಡಿದವು.

ಈ ಎಲ್ಲಾ ಅಂಶಗಳಿಗೆ ಪುಟವಿಟ್ಟಂತೆ 1993ರಲ್ಲಿ ಉನ್ನಿಕೃಷ್ಣನ್ v/s ಆಂಧ್ರಪ್ರದೇಶ ಸರ್ಕಾರದ ಪ್ರಕರಣದಲ್ಲಿ ನ್ಯಾಯಾಲಯ ನೀಡಿದ ತೀರ್ಪು ಅತ್ಯಂತ ಮಹತ್ತರವಾದುದು. ಅದರ ಸಂಗ್ರಹ ಇಲ್ಲಿ ನೀಡಿದೆ.

ಶಿಕ್ಷಣ ಒಂದು ಮೂಲಭೂತ ಹಕ್ಕು ಎಂದು ಸಾರಿದ ಸರ್ವೋಚ್ಚ ನ್ಯಾಯಾಲಯದ ಐತಿಹಾಸಿಕ ತೀರ್ಪಿನ ಸಾರ ಸಂಗ್ರಹ

(ಜೆ.ಪಿ. ಉನ್ನಿಕೃಷ್ಣನ್ ಮತ್ತಿತರರು v/s ಆಂಧ್ರಪ್ರದೇಶ ಸರ್ಕಾರ ಎ.ಐ.ಆರ್.ಎಸ್.ಸಿ.2178. 1993)

ನಮ್ಮೆದುರು ಇರುವ ಮೊದಲ ಪ್ರಶ್ನೆ ಭಾರತ ಸಂವಿಧಾನದ ಪರಿಚ್ಛೇದ 21 ರಲ್ಲಿ ನಮಗೆ ಖಾತರಿ ಮಾಡಲಾಗಿರುವ ಜೀವಿಸುವ ಹಕ್ಕಿನಲ್ಲಿ ಶಿಕ್ಷಣದ ಹಕ್ಕು ಸೇರಿದೆಯೋ ಅಥವಾ ಇಲ್ಲವೋ ಎಂಬುದು. ಆ ನಂತರ ಎರಡನೇ ಪ್ರಶ್ನೆ ಉದ್ಭವಿಸುತ್ತದೆ: ಜೀವಿಸುವ ಹಕ್ಕನ್ನು ಈಗಿರುವಂತೆ ಸರ್ಕಾರ ನೋಡುವುದಾದರೆ, ಅದು ಶಿಕ್ಷಣದ ಹಕ್ಕನ್ನು ಜೀವಿಸುವ ಹಕ್ಕಿನೊಂದಿಗೆ ಗಮನಿಸುತ್ತದೋ ಇಲ್ಲವೋ ಎಂಬುದು. ಈ ಹಕ್ಕಿನ ಉದ್ದೇಶ ಯಾವ ಬೆದರಿಕೆಯಿಂದಲೂ ಪ್ರೇರಿತವಾದುದಲ್ಲ. ಅದೇ ರೀತಿ ಜೀವಿಸುವ ಹಕ್ಕು ಏನನ್ನೋ ಕಸಿದುಕೊಳ್ಳುತ್ತಿದೆ ಅಥವಾ ವಂಚಿಸುತ್ತಿದೆ ಎನ್ನುವುದನ್ನು ಅವಲಂಬಿಸಿ ಕೂಡಾ ನಿರ್ಧರಿಸಲಾಗದು. ಜೀವಿಸುವ ಹಕ್ಕು ಎಂಬುದರಲ್ಲಿ ಶಿಕ್ಷಣದ ಹಕ್ಕು ಎಂಬುದು ಸೇರಿಹೋಗಿದೆ. ಅವುಗಳನ್ನು ಪ್ರತ್ಯೇಕವಾಗಿ ನೋಡಲಾಗದು ಎಂಬುದು ಸರ್ಕಾರಗಳು ತಮ್ಮ ಪ್ರಜೆಗಳಿಗೆ ಶಿಕ್ಷಣವನ್ನು ಕೊಡಲಾಗುವುದಿಲ್ಲ ಎಂದು ಹೇಳುವ ವಿಚಾರಕ್ಕೆ ವಿರುದ್ಧವಾಗಿದೆ.

ಈ ಮೇಲಿನ ಕಾನೂನಿಗೆ ಅನುಗುಣವಾಗಿ ಮೋಹಿನಿ ಜೈನ್ ಪ್ರಕರಣದಲ್ಲಿ (1992 ಎ.ಐ.ಆರ್.ಎಸ್.ಸಿ.ಡಬ್ಲ್ಯು 2100) ಹೇಳಿರುವ ಮಾತುಗಳನ್ನು ಶಿಕ್ಷಣದ ಹಕ್ಕು ಎಂಬುದು ಬದುಕುವ ಹಕ್ಕಿನಿಂದಲೇ ಬಂದಿದೆ. ಎತ್ತಿಹಿಡಿಯುವುದು ತಪ್ಪೇನಲ್ಲ. ಆದರೆ ಇಲ್ಲಿ ಬರುವ ಪ್ರಶ್ನೆ ಈ ಹಕ್ಕಿನ ಒಳಗಿರುವ ಅಂಶಗಳೇನು? ಎಷ್ಟು ಮತ್ತು ಎಂತಹ ಶಿಕ್ಷಣದ ಮಟ್ಟವಿದ್ದರೆ ಅರ್ಥಬದ್ಧವಾದ

ಜೀವನ ನಡೆಸಲು ಸಾಧ್ಯವಾಗುತ್ತದೆ? ಹಾಗೆಂದಾಗ ಈ ದೇಶದ ಪ್ರತಿಯೊಬ್ಬ ಪ್ರಜೆಯೂ ಸರ್ಕಾರದೆದುರು ಹೋಗಿ ನನಗೆ ನಾನು ಕೇಳುವಂತಹ ಈ ಮಟ್ಟದ ಶಿಕ್ಷಣವನ್ನೇ ಕೊಡಿ ಎಂದು ಕೇಳಬಹುದೇನು? ಅದನ್ನೇ ಸ್ವಲ್ಪ ಭಿನ್ನವಾಗಿ ಹೇಳುವುದಾದರೆ ಈ ದೇಶದ ಪ್ರಜೆಗಳು ಸರ್ಕಾರಕ್ಕೆ ನಾವು ಕೇಳಿದಷ್ಟು ಸಂಖ್ಯೆಯಲ್ಲಿ ವೈದ್ಯಕೀಯ ಕಾಲೇಜುಗಳು, ಎಂಜಿನಿಯರಿಂಗ್ ಕಾಲೇಜುಗಳು ಮತ್ತಿತರ ವಿದ್ಯಾಸಂಸ್ಥೆಗಳನ್ನು ಕೊಟ್ಟು ನಮ್ಮ ಬೇಡಿಕೆಗಳನ್ನು ಈಡೇರಿಸಿ ಎಂದು ಕೇಳಬಹುದೇನು? ನ್ಯಾಯಮೂರ್ತಿಗಳು ಇದಕ್ಕೆ ಹೌದು ಎಂದು ಹೇಳಿರುವಂತೆ ಕಾಣುತ್ತದೆ. ಈ ಮಾತುಗಳನ್ನು ನಾವು ಗೌರವದಿಂದಲೇ ವಿರೋಧಿಸಬೇಕಾಗುತ್ತದೆ. ಹೀಗೆ ಶಿಕ್ಷಣ ಎಂಬುದನ್ನು ಎಲ್ಲವನ್ನೂ ಒಳಗೊಂಡಂತಹ ರೀತಿಯಲ್ಲಿ ನೋಡಲಾಗದು. ಪರಿಚ್ಛೇದ 21ರಲ್ಲಿ ಖಾತರಿ ಮಾಡಿರುವ ಜೀವಿಸುವ ಹಕ್ಕು ಮತ್ತು ವೈಯುಕ್ತಿಕ ಸ್ವಾತಂತ್ರ ಎಂಬುದರಲ್ಲಿ ಶಿಕ್ಷಣದ ಹಕ್ಕು ಹಾಸುಹೊಕ್ಕಾಗಿದೆ. ನಿಜ, ಆದರೆ ಇದನ್ನು ಸಂವಿಧಾನದ ರಾಜ್ಯ ನಿರ್ದೇಶನ ತತ್ವಗಳ 4ನೇ ಭಾಗದ ಪ್ರಮುಖ ವಿಚಾರಗಳೊಂದಿಗೆ ಗಮನಿಸಬೇಕು. ಶಿಕ್ಷಣದ ಹಕ್ಕು ಎಂಬುದರ ಬಗ್ಗೆ ಭಾಗ 4ರಲ್ಲಿ ಹಲವಾರು ಪರಿಚ್ಛೇದಗಳು ನೇರವಾಗಿ ಪ್ರಸ್ತಾಪಿಸಿವೆ.

ಪರಿಚ್ಛೇದ 45, 46, ಮತ್ತು 41 ಶಿಕ್ಷಣದ ಒಂದು ಹಕ್ಕು ಆಗಲೆಂದೇ ರೂಪಿಸಲಾಗಿದೆ. ಈ ಪರಿಚ್ಛೇದಗಳ ಹಿನ್ನೆಲೆಯಲ್ಲಿ ಶಿಕ್ಷಣದ ಹಕ್ಕಿನಲ್ಲಿರಬೇಕಾದುದೇನು, ಅದರ ಸ್ವರೂಪ ಹೇಗಿರಬೇಕು? ಎಂಬುದನ್ನು ನಿರ್ಧರಿಸಬೇಕಾಗಿದೆ. ಪರಿಚ್ಛೇದ 45 ಮತ್ತು 41ರ ಹಿನ್ನೆಲೆಯಲ್ಲಿ ಶಿಕ್ಷಣದ ಹಕ್ಕು ಎಂಬುದನ್ನು ಹೀಗೆ ಅರ್ಥ ಮಾಡಿಕೊಳ್ಳಬಹುದು:

(ಎ) 14 ವರ್ಷ ಆಗುವವರೆಗೆ ಈ ದೇಶದ ಪ್ರತಿಯೊಬ್ಬ ಮಗು/ಪ್ರಜೆಗೆ ಉಚಿತ ಶಿಕ್ಷಣ ಪಡೆಯುವ ಹಕ್ಕು ಇದೆ.

(ಬಿ) ಈ ದೇಶದ ಮಕ್ಕಳಿಗೆ/ಪ್ರಜೆಗಳಿಗೆ 14 ವರ್ಷ ದಾಟಿದ ಮೇಲೆ ಅವರ ಶಿಕ್ಷಣದ ಹಕ್ಕು ಎಂಬುದು ಈ ದೇಶದ ಆರ್ಥಿಕ ಸಾಮರ್ಥ್ಯ ಮತು ಅಭಿವೃದ್ಧಿಯನ್ನು ಅನುಸರಿಸಿ ಇತಿಮಿತಿಯಲ್ಲಿ ಗಮನಿಸಬೇಕಾಗುತ್ತದೆ. ಈ ಎರಡನ್ನು ನಾವು ಪ್ರತ್ತೇಕವಾಗಿ ನೋಡಬೇಕಾಗಿದೆ.

"ಶಿಕ್ಷಣದ ಹಕ್ಕು ಎಂದರೆ ಒಬ್ಬ ಪ್ರಜೆ ದೇಶದ ಆರ್ಥಿಕ ಸಾಮರ್ಥ್ಯ ಮತು ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ತನಗೆ ಶಿಕ್ಷಣ ಕೊಡಿ. ಅದಕ್ಕೆ ಬೇಕಾದಂತಹ ವ್ಯವಸ್ಥೆ ಮಾಡಿ ಎಂದು ಬೇಡಿಕೆ ಸಲ್ಲಿಸಬಹುದು. ಹೀಗೆಂದು ಹೇಳಿ ನಾವು ಪರಿಚ್ಛೇದ 41ನ್ನು ಭಾಗ 4ರಿಂದ ಭಾಗ 2ಕ್ಕೆ ವರ್ಗಾಯಿಸುತ್ತಿಲ್ಲ. ನಾವು ಹೇಳುತ್ತಿರುವುದು ಪರಿಚ್ಛೇದ 21ರಿಂದ ಹೊರಹೊಮ್ಮುತ್ತಿರುವ ವಿಚಾರಗಳು ಪರಿಚ್ಛೇದ 41ರಲ್ಲಿ ಇದೆ. ಹಾಗಾಗಿ ಅದನ್ನು ನಾವು ಎತ್ತಿಕೊಳ್ಳುತ್ತಿದ್ದೇವೆ. ಯಾವುದೇ ಸರ್ಕಾರ ತನ್ನ ಆರ್ಥಿಕ ಸ್ಥಿತಿಗತಿ, ಅಭಿವೃದ್ಧಿಯ ಏಳು-ಬೀಳುಗಳನ್ನು ನೆಪಮಾಡಿಕೊಂಡು ತಾನು ತನ್ನ ಪ್ರಜೆಗಳಿಗೆ/ಮಕ್ಕಳಿಗೆ ಶಿಕ್ಷಣ ಕೊಡಲಾಗದು ಎಂದು ಹೇಳುವುದಿಲ್ಲ ಎಂದು ನಾವು ನಂಬಿದ್ದೇವೆ. ಆರ್ಥಿಕ ಇತಿಮಿತಿ ಎಂಬುದು ಆಯಾ ಸರ್ಕಾರಗಳ ನಂಬಿಕೆಗಳು ಮತ್ತು ನಿರ್ಧಾರಗಳನ್ನು ಅನುಸರಿಸಿವೆ ಎಂಬುದನ್ನು ನಾವು ಇಲ್ಲಿ ಒತ್ತಿಹೇಳಬೇಕಾಗಿಲ್ಲ. "ಈ ಮೇಲಿನ ಚರ್ಚೆಗಳು ಮತ್ತು ಅರ್ಥೈಸುವಿಕೆಯಿಂದ, ನಮ್ಮ ಫಿರ್ಯಾದಿಗಳು ಆತಂಕಪಟ್ಟಿರುವಂತೆ, ಈ ನ್ಯಾಯಾಲಯ ಪರಿಚ್ಛೇದ 21 ರೊಳಗೆ ಶಿಕ್ಷಣದ ಹಕ್ಕನ್ನು ಒಳಗೊಂಡಂತೆ ನೋಡಿದರೆ, ಈ ದೇಶದ ಜನರೆಲ್ಲಾ ಇತರ ನ್ಯಾಯಾಲಯಗಳಿಗೆ ಮೊರೆಹೊಕ್ಕು ತಮಗೆ ಬೇಕಾದಂತಹ ಶಿಕ್ಷಣ ಕೊಡಿಸುವಂತೆ ಸರ್ಕಾರಗಳ ಮೇಲೆ ಒತ್ತಡ ಹೇರುತ್ತಾರೆ. ಎಂಬುದರಲ್ಲಿ ಹುರುಳಿಲ್ಲವೆಂಬುದು ವ್ಯಕ್ತವಾಗಿದೆ. ಶಿಕ್ಷಣದ ಹಕ್ಕು ಎಂಬುದು ಈ ದೇಶದ ಮಕ್ಕಳು 14 ವರ್ಷ ದಾಟುವವರೆಗೆ ಮಾತ್ರ ಲಭ್ಯವಿದೆ. ಆ ನಂತರದ ಶಿಕ್ಷಣ ದೇಶದ ಆರ್ಥಿಕ ಸ್ವಾತಂತ್ರ ಮತ್ತು ಅಭಿವೃದ್ಧಿಯನ್ನು ಅವಲಂಭಿಸಿದೆ" ಭಾಗ 4 ರ ಎಲ್ಲ ವಿಚಾರಗಳನ್ನು ಪರಿಚ್ಛೇದ 21ರಲ್ಲಿ ತರಬೇಕೆಂದೇನೂ ನಾವು ಹೇಳುತ್ತಿಲ್ಲ. ಶಿಕ್ಷಣಕ್ಕೆ ಇರುವ ಮೂಲಭೂತ ಗುಣಗಳಿಂದಾಗಿ ನಾವು ಇದನ್ನು ಜೀವಿಸುವ ಹಕ್ಕಿನೊಂದಿಗೆ ಗಮನಿಸಬೇಕೆಂದು ಖಡಾಖಂಡಿತವಾಗಿ ಹೇಳುತ್ತಿದ್ದೇವೆ. ಶಿಕ್ಷಣದ ಹಕ್ಕು ಇದೆ ಎಂಬುದನ್ನು ನಾವು ಒತ್ತಿಹೇಳುವ ಅವಶ್ಯಕತೆಯಿರುವುದರಿಂದ ಪರಿಚ್ಛೇದ 41, 45 ಮತ್ತು 46 ನ್ನು ಇಲ್ಲಿ ಉಲ್ಲೇಖಿಸುತ್ತಿದ್ದೇವೆ" ನ್ಯಾಯ ಮೂರ್ತಿ ಜೀವನ ರೆಡ್ಡಿ ಮತ್ತಿತರ ನ್ಯಾಯಮೂರ್ತಿಗಳ ಪೀಠ 1993

ಮೇಲಿನ ತೀರ್ಪು, ಜೋಮ್‌ಟೀನ್ ಮತ್ತು ಸೆನೆಗಲ್ ಡಾಕರ್‌ಗಳಲ್ಲಿ ನಡೆದ ಜಾಗತಿಕ ಶಿಕ್ಷಣ ಹಕ್ಕಿನ ಒತ್ತಾಯಗಳು ಮತ್ತು ಭಾರತದ ರಾಜಕೀಯ ಇಚ್ಛಾಶಕ್ತಿಯಿಂದ 2002ರಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಸಂವಿಧಾನವು ಅಂಗೀಕರಿಸಿ 93ನೇ ತಿದ್ದುಪಡಿಯ ಮೂಲಕ 21(ಎ) ವಿಧಿಯನ್ನು ಜಾರಿಗೊಳಿಸಿತು. ಇದೊಂದು ಅಭೂತಪೂರ್ವ ಹೆಜ್ಜೆ. ಇದಕ್ಕೆ ಪೂರ್ವಾನ್ವಯವಾಗುವಂತೆ 2001ರಿಂದಲೇ ಸರ್ವ ಶಿಕ್ಷಣ ಅಭಿಯಾನ ಯೋಜನೆಯು ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಸಮರ್ಪಕ ಅನುಷ್ಠಾನಕ್ಕೆ ಹತ್ತು ಹಲವು ಕಾರ್ಯ ಯೋಜನೆಗಳ ಮೂಲಕ ಪ್ರಯತ್ನಿಸುತ್ತಾ ಸಾಗಿದೆ.

ಈ ಮೇಲಿನ ಮೂಲಭೂತ ಹಕ್ಕನ್ನು ಅನುಷ್ಠಾನಗೊಳಿಸುವ ನಿಮಿತ್ತ ರೂಪುಗೊಂಡ ಕಾಯ್ದೆಯೇ ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಮಕ್ಕಳ ಹಕ್ಕುಗಳ ಅಧಿನಿಯಮ-2009.

**ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಅಧಿನಿಯಮ, 2009**

**(2009ರ ಅಧಿನಿಯಮ ಸಂಖ್ಯೆ 35)** **[26ನೇ ಆಗಸ್ಟ್, 2009]**

**ಉಚಿತ ಮತ್ತು ಕಡ್ಡಾಯ ಶಿಕ್ಷಣ ಅಧಿನಿಯಮ 2009ರ ಆಯ್ದ ಭಾಗಗಳು. ಶಿಕ್ಷಣ ಸಂಯೋಜಕರಿಗೆ ಶಾಲೆ ಬಿಟ್ಟ ಮಕ್ಕಳನ್ನು ಹಾಗೂ ಶಾಲೆ ಬಿಟ್ಟ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಉಪಯುಕ್ತವಾದ ಕೆಲವು ಅಂಶಗಳನ್ನು ಇಲ್ಲಿ ನೀಡಿದೆ:**

ಆರರಿಂದ ಹದಿನಾಲ್ಕು ವರ್ಷದವರೆಗಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಒದಗಿಸಲು ಉಪಬಂಧ ಕಲ್ಪಿಸುವ ಒಂದು ಅಧಿನಿಯಮ.

ಭಾರತ ಗಣರಾಜ್ಯದ ಅರವತ್ತನೇ ವರ್ಷದಲ್ಲಿ ಇದು, ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

## ಅಧ್ಯಾಯ – II ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಹಕ್ಕು

**3. ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಗುವಿನ ಹಕ್ಕು – (1)** ಆರರಿಂದ ಹದಿನಾಲ್ಕು ವರ್ಷದೊಳಗಿನ ಪ್ರತಿಯೊಂದು ಮಗುವು ತನ್ನ ಹತ್ತಿರದ ಶಾಲೆಯಲ್ಲಿ ತನ್ನ ಪ್ರಾಥಮಿಕ ಶಿಕ್ಷಣವನ್ನು ಪೂರ್ತಿ ಮಾಡುವವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯುವ ಹಕ್ಕು ಹೊಂದಿರತಕ್ಕದ್ದು.

(2) (1)ನೇ ಉಪ–ಪ್ರಕರಣದ ಉದ್ದೇಶಕ್ಕಾಗಿ ಒಂದು ಮಗುವನ್ನು, ಅದು ಪ್ರಾಥಮಿಕ ಶಿಕ್ಷಣ ಪಡೆಯಲು ಮತ್ತು ಪೂರ್ಣಗೊಳಿಸಲು ಅಡ್ಡಿಯುಂಟು ಮಾಡಬಹುದಾದ ಯಾವುದೇ ಬಗೆಯ ಶುಲ್ಕ ಅಥವಾ ಖರ್ಚುಗಳನ್ನು ಅಥವಾ ವೆಚ್ಚಗಳನ್ನು ಸಂದಾಯ ಮಾಡುವುದಕ್ಕೆ ಗುರಿಪಡಿಸತಕ್ಕದ್ದಲ್ಲ.

ಪರಂತು, ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶಗಳು, ಸಂರಕ್ಷಣೆ ಮತ್ತು ಸಂಪೂರ್ಣ ಪಾಲ್ಗೊಳ್ಳುವಿಕೆ) ಅಧಿನಿಯಮ, 1996 (1996ರ 1)ರ 2ನೇ ಪ್ರಕರಣದ (1)ನೇ ಖಂಡದಲ್ಲಿ ಪರಿಭಾಷಿಸಲಾದಂತೆ ಅಂಗವಿಕಲತೆ ಹೊಂದಿರುವ ಮಗುವೊಂದು ಸದರಿ ಅಧಿನಿಯಮದ Vನೇ ಅಧ್ಯಾಯದ ಉಪಬಂಧಗಳಿಗನುಸಾರವಾಗಿ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ಪಡೆಯುವ ಹಕ್ಕನ್ನು ಹೊಂದಿರತಕ್ಕದ್ದು.

**4. ಪ್ರಾಥಮಿಕ ಶಿಕ್ಷಣಕ್ಕೆ ಸೇರಿಸಿರದ ಅಥವಾ ಅದನ್ನು ಪೂರ್ಣಗೊಳಿಸಿರದ ಮಕ್ಕಳಿಗಾಗಿ ವಿಶೇಷ ಉಪಬಂಧಗಳು –** ಆರು ವರ್ಷಕ್ಕೂ ಮೇಲ್ಪಟ್ಟ ಮಗುವೊಂದನ್ನು ಯಾವುದೇ ಶಾಲೆಗೆ ಸೇರಿಸದೆ ಇದ್ದಾಗ ಅಥವಾ ಸೇರಿಸಿದ್ದರೂ ಅವನು ಅಥವಾ ಅವಳು ತನ್ನ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸದೆ ಇದ್ದಾಗ, ಅವನ ಅಥವಾ ಅವಳ ಮಯಸ್ಸಿಗನುಗುಣವಾಗಿ ಸೂಕ್ತವಾದ ತರಗತಿಗೆ ಅವನನ್ನು ಅಥವಾ ಅವಳನ್ನು ಸೇರಿಸಿಕೊಳ್ಳತಕ್ಕದ್ದು.

ಪರಂತು, ಅವನ ಅಥವಾ ಅವಳ ವಯಸ್ಸಿಗನುಗುಣವಾಗಿ ಸೂಕ್ತ ತರಗತಿಗೆ ನೇರವಾಗಿ ಸೇರಿಸಿಕೊಳ್ಳಲಾದ ಮಗು ತನ್ನ ಇತರೆ ಸಹಪಾಠಿಗಳ ಜೊತೆಗೆ ಅವರ ಸಮನಾಗಿ ಆ ತರಗತಿಯ ಪಾಠಗಳನ್ನು ಕಲಿಯುವಂತೆ ಮಾಡಲು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಸಮಯದೊಳಗಾಗಿ ವಿಶೇಷ ತರಬೇತಿ ಪಡೆಯುವ ಹಕ್ಕು ಹೊಂದಿರತಕ್ಕದ್ದು;

ಮತ್ತು ಪರಂತು, ಪ್ರಾಥಮಿಕ ಶಿಕ್ಷಣಕ್ಕಾಗಿ ಹಾಗೆ ಸೇರಿಸಿಕೊಳ್ಳಲಾದ ಮಗುವು ಹಾಗೆ ಹದಿನಾಲ್ಕು ವರ್ಷ ಪೂರೈಸಿದಾಗ್ಯೂ, ಪ್ರಾಥಮಿಕ ಶಿಕ್ಷಣ ಪೂರೈಸುವವರೆಗೆ ಉಚಿತ ಶಿಕ್ಷಣ ಪಡೆಯಲು ಹಕ್ಕುದಾರನಾಗಿರತಕ್ಕದ್ದು.

**5. ಇತರ ಶಾಲೆಗೆ ವರ್ಗಾಯಿಸುವ ಹಕ್ಕು–(1)** ಶಾಲೆಯೊಂದರಲ್ಲಿ ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸಲು ಅವಕಾಶವಿಲ್ಲದಿರುವಾಗ, ಮಗುವೊಂದು 2ನೇ ಪ್ರಕರಣದ (ಎನ್) ಖಂಡದ (iii) ಮತ್ತು (iv)ನೇ ಉಪ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಶಾಲೆಯನ್ನು ಹೊರತುಪಡಿಸಿ, ತಾನು ತನ್ನ ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸಲು ಯಾವುದೇ ಇತರ ಶಾಲೆಗೆ ವರ್ಗಾವಣೆ ಕೋರುವ ಹಕ್ಕು ಹೊಂದಿರುತ್ತದೆ.

(2) ಯಾವುದೇ ಕಾರಣಕ್ಕಾಗಿ, ರಾಜ್ಯದೊಳಗಡೆಯಾಗಲಿ ಅಥವಾ ಹೊರಗಡೆಯಾಗಲಿ, ಮಗು ಒಂದು ಶಾಲೆಯಿಂದ ಮತ್ತೊಂದು ಶಾಲೆಗೆ ಹೋಗಬೇಕಾದ ಅಗತ್ಯ ಬಿದ್ದರೆ, ಅಂಥ ಮಗುವು 2ನೇ ಪ್ರಕರಣದ (ಎನ್) ಖಂಡದ (iii) ಮತ್ತು (iv) ನೇ ಉಪಖಂಡಗಳಲ್ಲಿ ನಿರ್ದಿಷ್ಟಪಡಿಸಲಾದ ಶಾಲೆಯನ್ನು ಹೊರತುಪಡಿಸಿ, ತನ್ನ ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸಲು ಯಾವುದೇ ಇತರ ಶಾಲೆಗೆ ವರ್ಗಾವಣೆ ಕೋರುವ ಹಕ್ಕನ್ನು ಹೊಂದಿರತಕ್ಕದ್ದು.

(3) ಅಂಥ ಇತರ ಶಾಲೆಯಲ್ಲಿ ಪ್ರವೇಶ ಪಡೆಯುವುದಕ್ಕಾಗಿ, ಅಂಥ ಮಗು ಈ ಹಿಂದೆ ಸೇರಿಕೊಂಡಿದ್ದ ಶಾಲೆಯ ಮುಖ್ಯ ಶಿಕ್ಷಕರು ಅಥವಾ ಶಾಲೆಯ ಪ್ರಭಾರಿ ಶಿಕ್ಷಕರು ಕೂಡಲೇ ವರ್ಗಾವಣೆ ಪ್ರಮಾಣ ಪತ್ರ ನೀಡತಕ್ಕದ್ದು.

ಪರಂತು, ವರ್ಗಾವಣೆ ಪ್ರಮಾಣ ಪತ್ರದ ಸಲ್ಲಿಕೆಯಲ್ಲಿ ವಿಳಂಬವಾಯಿತೆಂದು ಅಂಥ ಇತರ ಶಾಲೆಯಲ್ಲಿ ಸೇರಿಸಿಕೊಳ್ಳಲು ವಿಳಂಬ ಮಾಡುವುದಕ್ಕಾಗಲಿ ಅಥವಾ ಪ್ರವೇಶ ನಿರಾಕರಿಸುವುದಕ್ಕಾಗಲಿ ಕಾರಣವಾಗತಕ್ಕದ್ದಲ್ಲ.

ಮತ್ತೂ ಪರಂತು, ಮುಖ್ಯ ಶಿಕ್ಷಕರು ಅಥವಾ ಶಾಲೆಯ ಪ್ರಭಾರಿ ಶಿಕ್ಷಕರು ವರ್ಗಾವಣೆ ಪ್ರಮಾಣಪತ್ರ ನೀಡಲು ವಿಳಂಬ ಮಾಡಿದರೆ, ಅವರು ತಮಗೆ ಅನ್ವಯವಾಗುವ ಸೇವಾ ನಿಯಮಾವಳಿಯ ಅಡಿಯಲ್ಲಿ ಶಿಸ್ತುಕ್ರಮಕ್ಕೆ ಗುರಿಯಾಗತಕ್ಕದ್ದು.

## ಅಧ್ಯಾಯ – III ಸಮುಚಿತ ಸರ್ಕಾರ, ಸ್ಥಳೀಯ ಪ್ರಾಧಿಕಾರ ಮತ್ತು ತಂದೆ ತಾಯಿಯರ ಕರ್ತವ್ಯಗಳು

**8. ಸಮುಚಿತ ಸರ್ಕಾರಗಳ ಕರ್ತವ್ಯಗಳು.–** ಸಮುಚಿತ ಸರ್ಕಾರವು–

(ಎ) ಪ್ರತಿಯೊಂದು ಮಗುವಿಗೂ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ಒದಗಿಸತಕ್ಕದ್ದು:

ಪರಂತು, ಸಂದರ್ಭಾನುಸಾರ, ಮಗುವಿನ ತಂದೆ, ತಾಯಿ ಅಥವಾ ಪೋಷಕರು, ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರವು ಸ್ಥಾಪಿಸಿದ, ಒಡೆತನ ಹೊಂದಿದ, ನಿಯಂತ್ರಣ ಹೊಂದಿದ್ದ ಅಥವಾ ನೇರವಾಗಿ ಅಥವಾ ಪರೋಕ್ಷವಾಗಿ ಒದಗಿಸಿದ

ನಿಧಿಯಿಂದ ಗಣನೀಯವಾಗಿ ಹಣಕಾಸು ನೆರವನ್ನು ಪಡೆದಿರುವಂತಹ ಶಾಲೆಯಲ್ಲದ ಒಂದು ಶಾಲೆಯಲ್ಲಿ ತಮ್ಮ ಮಗುವನ್ನು ಸೇರಿಸಿದ್ದಲ್ಲಿ, ಸಂದರ್ಭಾನುಸಾರ, ಅಂಥ ಮಗು ಅಥವಾ ಅದರ ತಂದೆ, ತಾಯಿ ಅಥವಾ ಪೋಷಕರು ಅಂಥ ಇತರ ಶಾಲೆಯಲ್ಲಿ ಮಗುವಿನ ಪ್ರಾಥಮಿಕ ಶಿಕ್ಷಣಕ್ಕಾಗಿ ತಗುಲಿದ ವೆಚ್ಚದ ಮರು ಪಾವತಿಗಾಗಿ ಕ್ಲೇಮು ಮಾಡಲು ಹಕ್ಕುಳ್ಳವರಾಗಿರತಕ್ಕದ್ದಲ್ಲ.

**ವಿವರಣೆ** – "ಕಡ್ಡಾಯ ಶಿಕ್ಷಣ" ಎಂದರೆ,

1. ಆರರಿಂದ ಹದಿನಾಲ್ಕು ವರ್ಷ ವಯಸ್ಸಿನ ಪ್ರತಿಯೊಂದು ಮಗುವಿಗೂ ಉಚಿತ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವುದು.
2. ಆರರಿಂದ ಹದಿನಾಲ್ಕು ವರ್ಷಗಳ ವಯಸ್ಸಿನ ಪ್ರತಿಯೊಂದು ಮಗುವೂ ಪ್ರಾಥಮಿಕ ಶಿಕ್ಷಣಕ್ಕೆ ಕಡ್ಡಾಯವಾಗಿ ಸೇರಿಕೊಂಡು, ತಪ್ಪದೆ ಹಾಜರಾಗಿ ಶಿಕ್ಷಣ ಪೂರೈಸುವಂತೆ ನೋಡಿಕೊಳ್ಳುವುದು–ಸಮುಚಿತ ಸರ್ಕಾರದ ಹೊಣೆಗಾರಿಕೆ ಎಂದು ಅರ್ಥ.

(ಬಿ) 6ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದಂತೆ ಅಕ್ಕಪಕ್ಕದಲ್ಲೇ ಶಾಲೆಯು ದೊರಕುವಂತೆ ನೋಡಿಕೊಳ್ಳತಕ್ಕದ್ದು;

(ಸಿ) ದುರ್ಬಲ ವರ್ಗಕ್ಕೆ ಸೇರಿರುವ ಮಗುವಿನ ಬಗ್ಗೆ ಮತ್ತು ಅನುಕೂಲಸ್ಥರಲ್ಲದ ಗುಂಪಿಗೆ ಸೇರಿರುವ ಮಗುವಿನ ವಿರುದ್ಧ ಯಾವುದೇ ಕಾರಣದಿಂದ ತಾರತಮ್ಯ ಮಾಡದಂತೆ ಮತ್ತು ಪ್ರಾಥಮಿಕ ಶಿಕ್ಷಣ ಮುಂದುವರಿಸುವುದಕ್ಕೆ ಮತ್ತು ಅದನ್ನು ಪೂರ್ಣಗೊಳಿಸುವುದಕ್ಕೆ ಅಡ್ಡಿಪಡಿಸದಂತೆ ನೋಡಿಕೊಳ್ಳತಕ್ಕದ್ದು;

(ಡಿ) ಶಾಲೆಯ ಕಟ್ಟಡ, ಬೋಧನಾ ಸಿಬ್ಬಂದಿ ಮತ್ತು ಕಲಿಕಾ ಸಾಮಗ್ರಿ ಸೇರಿದಂತೆ ಮೂಲ ಸೌಕರ್ಯಗಳನ್ನು ಒದಗಿಸತಕ್ಕದ್ದು.

(ಇ) 4ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವಿಶೇಷ ತರಬೇತಿ ಸೌಲಭ್ಯವನ್ನು ಒದಗಿಸತಕ್ಕದ್ದು;

(ಎಫ್) ಪ್ರತಿಯೊಂದು ಮಗುವೂ, ಪ್ರಾಥಮಿಕ ಶಿಕ್ಷಣಕ್ಕೆ ಪ್ರವೇಶ ಪಡೆದು, ಹಾಜರಾಗಿ ಅದನ್ನು ಪೂರ್ಣಗೊಳಿಸುವಂತೆ ನೋಡಿಕೊಳ್ಳತಕ್ಕದ್ದು ಮತ್ತು ಆ ಬಗ್ಗೆ ಮೇಲ್ವಿಚಾರಣೆ ಮಾಡತಕ್ಕದ್ದು.

(ಜಿ) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಮಾನಕ ಗುಣಮಟ್ಟಗಳಿಗೆ ಮತ್ತು ಪ್ರಮಾಣಕಗಳಿಗೆ ಅನುಗುಣವಾಗಿ ಉತ್ತಮ ಗುಣಮಟ್ಟದ ಪ್ರಾಥಮಿಕ ಶಿಕ್ಷಣ ದೊರೆಯುವಂತೆ ನೋಡಿಕೊಳ್ಳತಕ್ಕದ್ದು.

(ಎಚ್) ಪ್ರಾಥಮಿಕ ಶಿಕ್ಷಣಕ್ಕಾಗಿ ಪಠ್ಯಕ್ರಮವನ್ನು ಮತ್ತು ವ್ಯಾಸಂಗ ಕ್ರಮಗಳನ್ನು ಸಕಾಲದಲ್ಲಿ ನಿಯಮಿಸುವಂತೆ ನೋಡಿಕೊಳ್ಳತಕ್ಕದ್ದು.

(ಐ) ಶಿಕ್ಷಕರಿಗೆ ತರಬೇತಿ ಸೌಲಭ್ಯವನ್ನು ಒದಗಿಸತಕ್ಕದ್ದು.

**9. ಸ್ಥಳೀಯ ಪ್ರಾಧಿಕಾರದ ಕರ್ತವ್ಯಗಳು.– ಪ್ರತಿಯೊಂದು ಸ್ಥಳೀಯ ಪ್ರಾಧಿಕಾರವೂ,–**

(ಎ) ಪ್ರತಿಯೊಂದು ಮಗುವಿಗೆ ಉಚಿತ ಮತ್ತು ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸತಕ್ಕದ್ದು;

ಪರಂತು, ಸಂದರ್ಭಾನುಸಾರ ಮಗುವಿನ ತಂದೆ ತಾಯಿ ಅಥವಾ ಪೋಷಕರು, ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರವು ಸ್ಥಾಪಿಸಿದ, ಒಡೆತನ ಹೊಂದಿದ, ನಿಯಂತ್ರಣ ಹೊಂದಿದ್ದ ಅಥವಾ ನೇರವಾಗಿ ಅಥವಾ ಪರೋಕ್ಷವಾಗಿ ಒದಗಿಸಿದ ನಿಧಿಯಿಂದ ಗಣನೀಯವಾಗಿ ಹಣಕಾಸು ನೆರವನ್ನು ಪಡೆದಿರುವಂಥ ಶಾಲೆಯಲ್ಲದ ಒಂದು ಶಾಲೆಯಲ್ಲಿ ತಮ್ಮ ಮಗುವನ್ನು ಸೇರಿಸಿದ್ದಲ್ಲಿ, ಸಂದರ್ಭಾನುಸಾರ, ಆ ಮಗು ಅಥವಾ ಅದರ ತಂದೆ ತಾಯಿ ಅಥವಾ ಪೋಷಕರು ಅಂಥ ಇತರ ಶಾಲೆಯಲ್ಲಿ ಮಗುವಿನ ಪ್ರಾಥಮಿಕ ಶಿಕ್ಷಣಕ್ಕಾಗಿ ತಗುಲಿದ ವೆಚ್ಚದ ಮರು ಪಾವತಿಗಾಗಿ ಕ್ಲೇಮು ಮಾಡಲು ಹಕ್ಕುಳ್ಳವರಾಗಿರತಕ್ಕದ್ದಲ;

(ಬಿ) 6ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದಂತೆ ಅಕ್ಕಪಕ್ಕದಲ್ಲೇ ಶಾಲೆಯು ದೊರಕುವಂತೆ ನೋಡಿಕೊಳ್ಳತಕ್ಕದ್ದು;

(ಸಿ) ದುರ್ಬಲ ವರ್ಗಕ್ಕೆ ಸೇರಿರುವ ಮಗುವಿನ ಬಗ್ಗೆ ಮತ್ತು ಅನುಕೂಲಸ್ಥರಲ್ಲದ ಗುಂಪಿಗೆ ಸೇರಿರುವ ಮಗುವಿನ ವಿರುದ್ಧ ಯಾವುದೇ ಕಾರಣದಿಂದ ತಾರತಮ್ಯ ಮಾಡದಂತೆ ಮತ್ತು ಪ್ರಾಥಮಿಕ ಶಿಕ್ಷಣ ಮುಂದುವರಿಸುವುದಕ್ಕೆ ಮತ್ತು ಅದನ್ನು ಪೂರ್ಣಗೊಳಿಸುವುದಕ್ಕೆ ಅಡ್ಡಿಪಡಿಸದಂತೆ ನೋಡಿಕೊಳ್ಳತಕ್ಕದ್ದು;

